# ಲತಾ ಶ್ರೀಧರ ಉವಾಚ



ಶ್ರೀ ಗಣೇಶ ಶಾರದ ಗುರುಭ್ಯೋ ನಮಃ

# ಲತಾ ಶ್ರೀಧರ ಉವಾಚ

ನಾದಾರ್ಚನೆಯ ಹಿರಿಯ ಸದಸ್ಯರಾದ ಲತಾ ಮತ್ತು ಶ್ರೀಧರ್ ಇಬ್ಬರೂ ನಾದಾರ್ಚನೆ ತಂಡದಲ್ಲಿರುವ ಎಲ್ಲರನ್ನೂ ಪ್ರೀತಿಯಿಂದ ಕಾಣುತ್ತಾ ಎಲ್ಲರ ಏಳ್ಗೆಗಾಗಿ ಶ್ರಮಿಸುತ್ತಾರೆ. ಮನೋರಂಜನೆ, ಬುದ್ಧಿಮಾತು, ನವಿರಾದ ಹಾಸ್ಯ ಇವರ ಮಾತುಗಳಲ್ಲಿ ತುಂಬಿರುತ್ತವೆ. ಒಮ್ಮೊಮ್ಮೆ ಅವರು ಥಟ್ ಎಂದು ಹೇಳುವ ಮಾತುಗಳು ತುಂಬಾ ತಮಾಷೆಯಾಗಿರುತ್ತವೆ. ನಾವೆಲ್ಲಾ ಅದನ್ನ ನಂತರ ನೆನೆಸಿಕೊಂಡು ಆನಂದ ಪಡುತ್ತಾ ಇರುತ್ತೇವೆ. ಅಂಥಹಾ ಮಾತುಗಳನ್ನೆಲ್ಲಾ ಸಂಗ್ರಹಿಸುವ ಒಂದು ಪ್ರಯತ್ನ ಇದು.

ಮೊದಲಿಗೆ ಲತಾ ಅವರ ನೆಚ್ಚಿನ ಸ್ನೇಹಿತೆಯಾದ, ನಂತರ ನಾದಿನಿಯಾದ ಸಂಧ್ಯಾರವರ ನುಡಿಗಳಲ್ಲಿ, ಅವರಿಬ್ಬರ ಐವತ್ತು ವರುಷದ ಒಡನಾಟದಲ್ಲಿ ನಡೆದಿರುವ ಪ್ರಸಂಗಗಳನ್ನು ಮೆಲುಕು ಹಾಕೋಣ ಬನ್ನಿ. Now, over to Sandhya.

ಈ ದಿನದ ವಿಶೇಷ ಏನು? ದಿನಾಂಕ 28-1-2023, ಶನಿವಾರ, ಮಾಘ ಶುಕ್ಲ ಪಕ್ಷ ಅಷ್ಟಮಿ, ಯೋಗ - ಶುಭ, ಕರಣ - ವಿಷ್ಟಿ, ರಾಹುಕಾಲ ಬೆಳಗ್ಗೆ 9.56 ರಿಂದ 11.17 ವರೆಗೆ, ಲಾಲಾ ಲಜಪತರಾಯರ ಜನ್ಮದಿನ, ಇದೆಲ್ಲಾ ಅನ್ಕೊಂಡ್ರಾ? ಇದ್ಯಾವುದೂ ನನಗೆ ಬೇಕಾಗಿಲ್ಲ. ನಾನು ಹೇಳಬೇಕೆಂದಿರುವ ಈ ದಿನದ ವಿಶೇಷವೇ ಬೇರೆ. ಅದೇನೆಂದರೆ, ನಮ್ಮೆಲ್ಲರ ಮೆಚ್ಚಿನ, ಮುದ್ದು ಮುಖದ, ಸಹೃದಯದ, ಎಲ್ಲರನ್ನೂ ಪ್ರೀತಿಸಬಲ್ಲ, ಇನ್ನೆಲ್ಲೂ ಕಾಣದ ಅಪರೂಪದ ವ್ಯಕ್ತಿತ್ವದ ನಮ್ಮ ಪ್ರೀತಿಯ ಲತನ ಹುಟ್ಟುಹಬ್ಬ ಈ ದಿನ. ನಮ್ಮ ನಾದಾರ್ಚನೆಯಲ್ಲಿ ಹಾಡು, ಕಥೆ, ಕವನ, ಭಾಷಣ, ಸ್ತೋತ್ರ ಮುಂತಾದ ಹಲವು ರೀತಿಯ ಕಾರ್ಯಕ್ರಮಗಳು ನಡೆಯುತ್ತಲೇ ಇರುತ್ತವೆ. ಆದರೆ ಇವೆಲ್ಲಕ್ಕಿಂತ ವಿಭಿನ್ನವಾದದ್ದನ್ನು ಈ ದಿನ ನನ್ನ ಕಡೆಯಿಂದ ನಿಮ್ಮೆಲ್ಲರೊಡನೆ ಹಂಚಿಕೊಳ್ಳಬೇಕೆನಿಸಿದೆ. ಸಾಮಾನ್ಯವಾಗಿ ನಾನು ಯಾರೊಂದಿಗಾದರೂ ಮಾತನಾಡುವಾಗ ನನಗೆ ತೋಚಿದ್ದು ಮಾತಾಡಿರ್ತೀನಿ. ನಂತರ ನಿಧಾನವಾಗಿ ಒಳ್ಳೆಯ ಉತ್ತರ ಹೊಳೆಯುತ್ತೆ. ವಿಷಯ ಹಳೇದಾದ ಮೇಲೆ ನನಗೆ ಸರಿಯಾಗಿ ಅರ್ಥ ಆಗಿ, ಅಯ್ಯೋ, ಇದು ನನಗೆ ಅವತ್ತೇ ಹೊಳೆದಿದ್ರೆ ಎಷ್ಟು ಚೆನ್ನಾಗಿರ್ತಿತ್ತು ಅಂತ ಅನಿಸಿದರೂ ಕಾಲ ಮಿಂಚಿಹೋಗಿರತ್ತೆ. ಆ ಮಾತು ಪ್ರಯೋಜನಕ್ಕೆ ಬರದ ಹಾಗೆ ಆಗಿ ಹೋಗಿರತ್ತೆ. ಆದರೆ, ನಮ್ಮ ಲತನ ವಿಷಯ ಹಾಗಲ್ಲ. ಅವರ ರಿಯಾಕ್ಷನ್ ಮಿಂಚಿಗಿಂತಲೂ ವೇಗ, ಚಟ್ ಪಟ್ ಚಿನಕುರಳಿ ಅಂತಾರಲ್ಲಾ ಹಾಗೆ. ಅವರ ಅಂತಹಾ ಮಾತುಗಳನ್ನು ನಾನು ಕೇಳುತ್ತಿರುವುದು ಇವತ್ತು, ನೆನ್ನೆಯಿಂದಲ್ಲ. ಸುಮಾರು ಐವತ್ತು ವರುಷಗಳಿಗೂ ಮೀರಿದ ಬಾಂಧವ್ಯ, ಅನುಬಂಧ ನಮ್ಮದು. ನಾನು ಮೊದಲೇ ಹೇಳಿದ ಹಾಗೆ ಅವರ ಮಾತುಗಳನ್ನೆಲ್ಲಾ ಬರೆದಿಡಬೇಕಾಗಿತ್ತು ಅಂತ ನನಗೆ ಈಗ ಹೊಳೆಯುತ್ತಿದೆ. ಆ ಸಂಗ್ರಹವೇ ಎಷ್ಟು ಸುಂದರವಾಗಿರುತ್ತಿತ್ತು ಎಂದು ಈಗ ಅನಿಸುತ್ತಿದೆ. ಒಂದೆರಡು ಅಂತಹಾ ಮಾತುಗಳನ್ನು ಈಗ ನಿಮ್ಮೊಂದಿಗೆ ಹಂಚಿಕೊಳ್ಳಬೇಕೆನಿಸಿದೆ.
ಅದರಲ್ಲಿ ಈಗ ಮೊದಲನೆಯದು.

1. ಲತ ಕಾಲೇಜಿನ ವಿದ್ಯಾರ್ಥಿಯಾಗಿದ್ದ ದಿನಗಳ ಒಂದು ಸಂದರ್ಭ. ಆಂಟಿ ಹಾಗೂ ಲತನ ಒಂದು ಸಂಭಾಷಣೆ.

ಆಂಟಿ - ಲತಾ, ನಿನ್ನ ಮಾತುಗಳು ಯಾಕೋ ಮೊದಲಿನಂತಿಲ್ಲ. ಇತ್ತೀಚೆಗೆ ನೀನು ಮಾತಾಡ್ತಿರೋದು ನನಗೆ ಸರಿ ಕಾಣ್ತಿಲ್ಲ. ನೀನು ಲವ್ ಬಗ್ಗೆ ತುಂಬಾ ಮಾತಾಡ್ತಿದಿ.

ಲತ - ಎಲ್ಲಾರೂ ಲವ್ ಮಾಡಕ್ಕೆ ಶುರು ಮಾಡಿದಾರೆ ಆಂಟೀ, ನಾನು ಬರೀ ಮಾತಾಡಕ್ಕೆ ಶುರು ಮಾಡಿದೀನಿ.

ಆಂಟಿ - **ಮೌನ.**

2. ಈಗ ಎರಡನೆಯದು.

ಸುನೀತನ ಮದುವೆಯ ಸಂದರ್ಭ. ನನ್ನ ಹಾಗೂ ಸುನೀತನ ಮದುವೆ ಕಾಲದಲ್ಲಿ ನಮಗೆ ಲತನಿಗಿಂತ ಮಿಗಿಲಾದ ಬ್ಯೂಟಿಶಿಯನ್ ಯಾರೂ ಇರಲಿಲ್ಲ. ಲತ ಹಾಗೂ ಪಪ್ಪನ ಸಂಭಾಷಣೆ. ಯಾವರೀತಿಯ ಜಡೆ ಸುನೀತಳಿಗೆ ಚೆನ್ನಾಗಿರತ್ತೆ ಅಂತ ಲತ ರಿಹರ್ಸಲ್ ಮಾಡ್ತಿದ್ರು.

ಪಪ್ಪ - ಏ ಲತಾ, ಅವಳನ್ನೇನು ಹಳ್ಳಿ ಹುಡುಗಿ ಅನ್ಕೊಂಡ್ಯೇನೇ, ಆ ರೀತಿ ಮೊಗ್ಗು ಹೂವು ಎಲ್ಲಾ ಇಟ್ಕೊಂಡು ಕುಚ್ಚಿನ ಜಡೆ ಹಾಕಕ್ಕೆ? She is an Engineer.

ಲತ - ಬುದ್ಧಿ ಇದ್ದಿದ್ರಿಂದ ಇಂಜಿನಿಯರ್, ಹೆಣ್ಣಾಗಿ ಹುಟ್ಟಿದ್ದಕ್ಕೆ ಮೊಗ್ಗಿನ ಜಡೆ.

ಪಪ್ಪ - **ಮೌನ.**

3. ಈಗ ಮೂರನೆಯದು.

ಅರ್ಚನನ ಮದುವೆ ಸಂದರ್ಭ. ದೊಡ್ಡ ದೊಡ್ಡ ಚಕ್ಕುಲಿ, ಉಂಡೆಗಳನ್ನು ನರಸಿಂಹ ಕವರ್ ಗಳಿಗೆ ಹಾಕಿ ಪ್ಯಾಕ್ ಮಾಡ್ತಿದ್ದ. ಆಗ ಪಪ್ಪ ಮತ್ತು ಲತನ ಸಂಭಾಷಣೆ.

ಪಪ್ಪ - ಇದೇನೋ ನರಸಿಂಹಾ, ಚಕ್ಕುಲಿ ಕಟ್ಟಕ್ಕೇನೋ ನಿನ್ನ M.B.B.S ಓದ್ಸಿದ್ದು?

ಲತ - ಇಲ್ಲಿ ಅಕ್ಕ ತಮ್ಮನ ಬಾಂಧವ್ಯ count ಆಗತ್ತೆ. M.B.B.S, I.A.S degree count ಆಗಲ್ಲ.

ಪಪ್ಪ - **ಮೌನ.**

4. ಲತನ ಮನೆ (ಅಂದರೆ ಈಗಿನ ಲತನ ಅಮ್ಮನ ಮನೆ) ಪಕ್ಕದಲ್ಲಿದ್ದ ಅನಸೂಯನಿಗೆ ಲತಾ ಎಂದರೆ ಬಹಳ ವಿಶ್ವಾಸ. ಲತನ್ನ ಕಂಡರೆ ವಿಶ್ವಾಸ ಇಲ್ಲದವರ್ಯಾರು? ಅದು ಬೇರೆ ವಿಷಯ. ಲತನಲ್ಲಿ ಅನಸೂಯನಿಗೆ ಬಹಳ ಸಲಿಗೆ ಇತ್ತು. ಹಾಗಾಗಿ ಈ ಸಂಭಾಷಣೆ. ಅಪ್ಪಿ ಹುಟ್ಟಿದ ಕೆಲವು ದಿನಗಳ ನಂತರ ನಡೆದದ್ದು.

ಅನಸೂಯ - ಹೋಗೇ ಲತಾ, ಎರಡನೆ ಮಗೂನೂ ನಿನಗೆ ಹೆಣ್ಣೇ ಆಯ್ತು. ಅದಾದ್ರೂ ಗಂಡುಮಗು ಆಗಬಾರದಿತ್ತೇ? ನನಗಂತೂ ತುಂಬಾ ಬೇಜಾರಾಯ್ತು.

ಲತ - ಅಯ್ಯೋ ಅನಸೂಯಾ, ಅದಕ್ಯಾಕೆ ಬೇಜಾರು ಮಾಡ್ಕೋತೀರ, ನಿಮ್ಮನೆ ಬಾಲು ತರ ಗಂಡು ಮಗುಗಿಂತ ನಮ್ಮನೆ ಸುನೀತನ ತರ ಹೆಣ್ಣುಮಗು ಆದ್ರೆ ನಾಲಕ್ಕನೇದು ಹೆಣ್ಣಾದರೂ ಬೇಜಾರಿಲ್ಲ ಅಲ್ವೆ?

ಅನಸೂಯ - **ನೀರವ ಮೌನ.**

5. ನನಗೆ ಗಂಡು ನೋಡುತ್ತಿದ್ದ ಸಮಯ. ಆ ದಿನ ಒಂದು ಗಂಡು ನೋಡಿದ್ರಿಂದ ಅದರ ಬಗ್ಗೆ ಅಮ್ಮ ಹಾಗೂ ಲತನ ಸಂಭಾಷಣೆ.

ಅಮ್ಮ - ಇವತ್ತು ಬಂದಿದ್ದ ಗಂಡು ನನಗೆ ಇಷ್ಟ ಆಗ್ಲಿಲ್ಲ ಲತ.

ಲತ - ಕಾರಣ ಏನು?

ಅಮ್ಮ - ಈ ಹುಡುಗನ ತಲೇಲಿ ಬಿಳಿ ಕೂದಲು ಈ ವಯಸ್ಸಿಗೇ ಆರಂಭ ಆಗಿದೆ.

ಲತ - ಹೀಗೇ ಆಗ್ತಾ ಇದ್ರೆ ಸಂಧ್ಯನ್ ತಲೆಕೂದಲು ಪೂರ್ತಿ ಬೆಳ್ಳಗಾಗತ್ತೆ, ಆಮೇಲೆ ಏನು ಮಾಡ್ತೀರ?

ಅಮ್ಮ - **ಮೌನ.**

6. ನನ್ನ ಅತ್ತಿಗೆ ಜಯ ಇದ್ದ ಕಡೆ ಸ್ವಲ್ಪ ವಾದ ವಿವಾದಗಳು ಸಾಮಾನ್ಯವಾಗಿ ಇರುತ್ತಿತ್ತು. ನಾನು, ಲತ, ಜಯ ಒಟ್ಟಾಗಿದ್ದ ಸಂದರ್ಭ. ನಮ್ಮ ಟಾಪಿಕ್, ಲವ್ ಮ್ಯಾರೇಜ್ ಬಗ್ಗೆ ಆಗಿತ್ತು. ಆ ಸಂದರ್ಭದಲ್ಲಿ ಸಂಭಾಷಣೆ ಹೀಗಿತ್ತು.

ಜಯ - ಈ ಮದುವೆ ವಿಷಯ ಬಂದ್ರೆ ಲವ್ ಮ್ಯಾರೇಜ್ ಗಳ ಬಗ್ಗೆ ನನಗೆ ಇಷ್ಟ ಆಗಲ್ಲಪ್ಪ. ಅದ್ರಲ್ಲೆಲ್ಲಾ ನಮ್ಮ ಕಡೆ ಅಂದ್ರೆ ಕರ್ನಾಟಕರೇ ಸರಿ. ಕರ್ನಾಟಕರಲ್ಲಿ ಲವ್ ಮ್ಯಾರೇಜ್ ಆದ ಒಂದು ಉದಾಹರಣೆಯೂ ಇಲ್ಲಪ್ಪ. ನಮ್ಮ ಕಡೇನೇ ಸರಿ.

(ತಕ್ಷಣ) ಲತ - ಏನ್ ಜಯಾ, ಕರ್ನಾಟಕರಲ್ಲಿ ಲವ್ ಮ್ಯಾರೇಜ್ ಆಗೇ ಇಲ್ವಾ? ಹಂಗಾದ್ರೆ ಅದರ ಅರ್ಥ ಕರ್ನಾಟಕರೇ ಸರಿ ಅಂತ ಅಲ್ಲ. ಅದರ ಅರ್ಥ ಕರ್ನಾಟಕರನ್ನ ಯಾರೂ ಲವ್ ಮಾಡಿಲ್ಲ ಅಂತ.

ಜಯ - **ಮೌನ.**

7. ಸೌಭಾಗ್ಯ ಮತ್ತು ಶಂಕರ ಅವರ wedding day ಸಂದರ್ಭದಲ್ಲಿ ನಾದಾರ್ಚನೆ ಕಾರ್ಯಕಮಕ್ಕೆ ಲತ ನನಗೆ ಒಂದು ಹಾಡು ಹುಡುಕಕ್ಕೆ ಹೇಳಿದ್ರು. ನಾನು ಲತನಿಗೆ ಫೋನ್ ಮಾಡಿ, “ಯಾವ ಜನ್ಮದ ಮೈತ್ರಿ” ಅಂತ ಹೇಳಿದೆ. ಲತ ತಕ್ಷಣ “ನನಗೆ ಇಲ್ದೆ ಇರೋದೆಲ್ಲಾ ಹಾಡಕ್ಕೆ ಆಗಲ್ಲ. ಜಬ್ ಚಾಹೆ ಮಾ ರೂಟೆ ಯಾ ಬಾಬಾ ಹಾಡು ಬರ್ಕೋ ಅದರ ಬದ್ಲು” ಅಂದ್ರು.

8. ನಾದಾರ್ಚನೆ ಕಾರ್ಯಕ್ರಮದಲ್ಲಿ ಒಮ್ಮೆ ಸುನೀತ ಕೇಳಿದ್ಲು, “ಅಕ್ಕಾ ಕನಕಧಾರಾ ಸ್ತೋತ್ರ ಯಾವ ರಾಗದಲ್ಲಿ ಹಾಡಬೇಕು?” ಅಂದಾಗ ಲತನ ಉತ್ತರ “ಮೊದಲು ಸ್ತೋತ್ರದ ಹಾಗೆ ಹೇಳು ಸಾಕ್ ಸಾಕು”

9. ನನ್ನ ಅಮ್ಮ ಯಾರೋ ಅವರ ಪರಿಚಿತರ ಕುಟುಂಬದವರ ಬಗ್ಗೆ ಲತನಿಗೆ ವರ್ಣಿಸ್ತಾ “ಅಯ್ಯೋ ಲತಾ ಅವರ ಮನೆ ಮಕ್ಕಳು ಸಮುದ್ರದಂಥಾ ಗಂಭೀರ” ಎಂದಾಗ ಲತ ತಕ್ಷಣದ ಉತ್ತರ “ಸೈಕ್ಲೋನು ಬಂದಾಗ?” ಎಂಬುದಾಗಿತ್ತು.

10. ಲತನ ಸ್ನೇಹಿತೆ ಶೈಲಾ ನನಗೂ ಸ್ವಲ್ಪ ಫ್ರೆಂಡ್ ಆಗಿದ್ದರಿಂದ, ಅವಳಿಗೆ ಗಂಡು ಹುಡುಕುತಿದ್ದಾಗ ಅವಳು ನನ್ನ ಹತ್ತಿರ ಹೇಳಿದ್ಲು “ನನಗೆ ಹುಡುಗ ಧರ್ಮೇಂದ್ರ ಅಥವಾ ಅನಂತನಾಗ್ ತರ ಇದ್ದರೆ ಇಷ್ಟ” ಅಂತ. ಆಗ

ನಾನು ಅದನ್ನ ಲತನಿಗೆ ಹೇಳಿದ್ರೆ, "ಅವಳು ಕನ್ನಡಿ ನೋಡ್ಕೊಂಡಿದಾಳಾ" ಅಂತ ತಕ್ಷಣ ಕೇಳಿದ್ರು. ನಾನು "ಯಾಕೆ ಲತಾ, ಯಾಕೆ ಲತಾ" ಅಂತಾನೇ ಇದ್ದೆ. ಅದಕ್ಕೆ ಲತ "ಅವಳೇನು ಹೇಮಮಾಲಿನಿ ತರ ಅಥವಾ ಲಕ್ಷ್ಮಿ ತರ ಇದಾಳಾ" ಅಂದಾಗ, ಲತನ ಮಾತಿನಲ್ಲಿದ್ದ "Self-assessment" ಮೆಸೇಜ್ ನನಗೆ ನಿಧಾನವಾಗಿ ತಲೇಗೆ ಹೋಯ್ತು.

11. ಮಮ್ಮಿ ಮನೇಗೆ ಒಮ್ಮೆ ವರಮಹಾಲಕ್ಷ್ಮಿ ಹಬ್ಬದ ದಿನ ಹೋಗಿದ್ದೆ. ಅಡಿಗೆಗೆ ಬರುವ ಆಶಾ ಅವರು ತಡವಾಗಿ ಬಂದಿದ್ದಕ್ಕೆ ಕೋಪ ಬಂದು ಬೈದು ವಾಪಸ್ ಕಳಿಸಿಬಿಟ್ಟೆ ಅಂತ ಲತನಿಗೆ ಮಮ್ಮಿ ಹೇಳ್ದಾಗ, "Better late than never" ಅಂತ ಲತನಿಗೆ ಅನ್ನಿಸಿರಬೇಕು. ಪಟ್ ಅಂತ ಹೇಳಿದ್ರು, "ಅಮ್ಮಾ ನಾನು ಅರ್ಚನನ್ನಾದ್ರೂ ಬೈತೀನಾಗ್ಲಿ ನಮ್ಮ ಕೆಲಸದ ರತ್ನನ್ನ ಯಾವತ್ತೂ ಬೈಯ್ಯಲ್ಲ" ಅಂತ. "Secret of success" ಮೆಸೇಜ್ ಆ ಮಾತಿನಲ್ಲಿ ತುಂಬಿ ತುಳುಕ್ತಾ ಇತ್ತು.

12. ನಾನು ಪಿ.ಯೂ.ಸಿ ಯಲ್ಲಿದ್ದಾಗ ನನಗೆ ಹೇಮಾ ಅಂತ ಒಬ್ಬಳು ಹೊಸಾ ಫ್ರೆಂಡ್ ಆದಳು. ಅವಳ, ನನ್ನ ಗೆಳೆತನ ಮುಂದೆಯೂ ಮುಂದುವರೆಯಿತು. ಅವಳಿಗೆ ತಂದೆ ಇರಲಿಲ್ಲ, ತಾಯಿಯೂ ಕೆಲದಲ್ಲೇನೂ ಇರಲಿಲ್ಲ. ಅವಳು Financially weak ಆಗಿದ್ದ ಕುಟುಂಬದಿಂದ ಬಂದವಳಾಗಿದ್ದಳು. ವಯಸ್ಸಿಗೆ ಬಂದ ಹೆಣ್ಣುಮಕ್ಕಳನ್ನು ಸಾಮಾನ್ಯವಾಗಿ ಅನೇಕರು ಕೇಳುವ ಪ್ರಶ್ನೆ "ಮದುವೆ ಯಾವಾಗ? ಮದುವೆ ಯಾವಾಗ?" ಅನ್ನೋದು. ಅವಳು ಎಲ್ಲರಿಗೂ ಕೊಡುತ್ತಿದ್ದ ಒಂದೇ ಉತ್ತರ "ದೇವರು ಕಣ್ಬಿಟ್ಟಾಗ, ದೇವರು ಕಣ್ಬಿಟ್ಟಾಗ" ಅಂತ. ಮುಂದೆ ಮದುವೆ ಎಂಬ ಲಾಟರಿಯಲ್ಲಿ ಅವಳಿಗೆ ಸಿಕ್ಕಿದ್ದು ಅತ್ಯಂತ ಆಗರ್ಭ ಶ್ರೀಮಂತ ಹುಡುಗ. ಆ ವಿಷಯ ಗೊತ್ತಾದಾಗ ನನ್ನ ಹತ್ತಿರ ಲತನ ಚಟ್ ಪಟ್ ರಿಯಾಕ್ಷನ್ ಹೀಗಿತ್ತು. "ಅಂತೂ ದೇವರು ಕಣ್ ಬಿಡ್ತಾ ಬಿಡ್ತಾ ಏನು ದೊಡ್ಡದಾಗಿ ಜೋರಾಗೇ ಕಣ್ಣು ಬಿಟ್ನಲ್ಲಾ ಸಂಧ್ಯಾ"

13. ಅರ್ಚನಾ ಬಂದಿದ್ದ ಕಾರಣ ಹೋಟೆಲ್ ನಲ್ಲಿ ಪಾರ್ಟಿ ಅರೇಂಜ್ ಆಗಿತ್ತು. ಅಲ್ಲಿ ನಮ್ಮ ಫ್ಯಾಮಿಲಿಯವರು ಎಲ್ಲರೂ ಸೇರಿದ್ವಿ. ಅಲ್ಲಿ ವಿಶ್ವನಾಥ್ ಮತ್ತು ಲತನ ಸಂಭಾಷಣೆ ಹೀಗಿತ್ತು.

ವಿಶ್ವನಾಥ್ - ಅಲ್ಲಾ, ನೀವೆಲ್ಲಾ ಇದೀರ. ಎಷ್ಟೆಲ್ಲಾ ಸಂತೋಷವಾಗಿ ಇರಬಹುದು. ನೋಡಿ, ಆದರೂ ಸಂಧ್ಯ ಯಾಕೋ ಮನೇಲಿ ತುಂಬಾ ಗಡಿಬಿಡಿ, ಟೆನ್ಷನ್ ಮಾಡ್ಕೋತಾಳೆ. ಅವಳಿಗೆ ಸ್ವಲ್ಪ ಬುದ್ಧಿ ಹೇಳಿ. ನೀವು ಹೇಳಿದ್ರೆ ಕೇಳ್ತಾಳೆ.

ಲತ - ನಮ್ಮ ಜೊತೆ ತುಂಬಾ ಚೆನ್ನಾಗೇ ಇರ್ತಾಳೆ, ಟೆನ್ಷನ್ನೂ ಗಿನ್ಷನ್ನೂ ಏನೂ ಇಲ್ಲದೆ, ಮನೇಲಿ ಟೆನ್ಷನ್ ಮಾಡಿಕೊಂಡ್ರೆ ಮನೇಲಿ ಇರೋರು ತಾನೇ ಟೆನ್ಷನ್ಗೆ ಕಾರಣ, ಸಲ್ಯೂಷನ್ ಎಲ್ಲಾ ಹುಡುಕಬೇಕು? ಆಚೆ ಇರೋವ್ರಿಗೆ ಏನು ಗೊತ್ತಾಗತ್ತೆ?

ವಿಶ್ವನಾಥ್ - (ತೊದಲುತ್ತಾ) ಹೌದು, ಹೌದು, ಹೌದು, ನೀವು ಹೇಳೋದು ಸರಿ.

14. ನಾದಾರ್ಚನೆಯ ಆರಂಭದ ದಿನಗಳಲ್ಲಿ ನನ್ನ, ಲತನ ಸಂಭಾಷಣೆ.

ಸಂಧ್ಯಾ - ನಾನು ಇವತ್ತು ಹಾಡಕ್ಕೆ ರೆಡೀ ಇಲ್ಲ.

ಲತ - ಯಾಕೆ?

ಸಂಧ್ಯಾ - ನಾನು ಚೆನ್ನಾಗಿ ಹಾಡಕ್ಕೆ ಪ್ರಾಕ್ಟೀಸ್ ಮಾಡ್ಕೊಂಡಿಲ್ಲ ಇವತ್ತು.

ಲತ - ನೀನು ಯಾವತ್ತು ಚೆನ್ನಾಗಿ ಹಾಡಿದೀ? ಹಾಗಂತ ನಾವೆಲ್ಲಾ ಕೇಳಿಸ್ಕೊಳ್ಳದೇ ಇದೀವಾ ಯಾವತ್ತಾದರೂ?

ಸಂಧ್ಯಾ - **ಮೌನ.**

15. ರೀಸೆಂಟ್ ಆಗಿ ಅಪ್ಪಿಗೆ ಅವಾರ್ಡ್ ಬಂದಾಗ ಲತ ಹಾಗೂ ನನ್ನ ಸಂಭಾಷಣೆ ಹೀಗಿತ್ತು.

ಸಂಧ್ಯಾ - ತುಂಬಾ ಸಂತೋಷ ಆಯ್ತು ಲತಾ, ಇದರ ಕ್ರೆಡಿಟ್ ನ ಸಿಂಹಪಾಲು ನಿಮಗೆ.

ಲತ - ಯಾಕೆ?

ಸಂಧ್ಯಾ - ಫೌಂಡೇಶನ್ ಹಾಕಿದವರು ನೀವೇ ತಾನೇ? ಫೌಂಡೇಶನ್ ಇಲ್ಲದೆ ಬಿಲ್ಡಿಂಗ್ ಹೇಗೆ ಆಗತ್ತೆ?

ಲತ - (ನಗುತ್ತಾ) ದುಡ್ಡೆಲ್ಲಾ ಫೌಂಡೇಶನ್ ಗೇ ಖರ್ಚಾದರೆ ಬಿಲ್ಡಿಂಗ್ ಏರೋದೇ ಇಲ್ವಲ್ಲಾ ಸಂಧ್ಯಾ.

ಇಲ್ಲಿ ಕೆಲವು ಅವರ ಅನುಭವ, ಅಭಿಪ್ರಾಯ ಮತ್ತು ಮಾರ್ಮಿಕ ವಿಷಯಗಳಿದ್ರೂ, ಈ ಅರ್ಥಗರ್ಭಿತ ಸಂಭಾಷಣೆಯಿಂದ ಇಬ್ಬರೂ ಮನಸಾರಾ ನಿರಂತರವಾಗಿ ನಕ್ಕಿದ್ದು ಮಾತ್ರ ಇನ್ನೂ ಚೆನ್ನಾಗಿ ನೆನಪಲ್ಲಿದೆ.

16. ಆಗಿನ್ನೂ ಈಗಿನಂತೆ ದ್ರೌಪದಿ ಅಕ್ಷಯ ವಸ್ತ್ರದಷ್ಟು ಸೀರೆಗಳು ಲತನ ಬಳಿ ಇಲ್ಲದ ಕಾಲ ಅದಾಗಿತ್ತು. ನನ್ನ ಫ್ರೆಂಡ್ ಉಮನ ಮನೆ ಫಂಕ್ಷನ್ ಗೆ ಮಾರನೆಯ ದಿನ ನಮ್ಮ ಮನೆಯವರೆಲ್ಲಾ ಹೋಗುವುದಿತ್ತು. ಉಮನ ಅಕ್ಕ ಸಾವಿತ್ರಿ ಬಹಳ ಅಪರೂಪದ ಡಿಸೈನ್ ಸೀರೆ ಉಡ್ತಾರೆ ಅಂತಾನೇ ಆಗ ಸ್ವಲ್ಪ ಪ್ರಸಿದ್ಧಿ. ಆಗಿನ ಲತ ಮತ್ತು ಶ್ರೀಧರನ ಸಂಭಾಷಣೆ ಹೀಗಿತ್ತು.

ಲತ - ನಾಳೆ ಉಮನ ಮನೆ ಫಂಕ್ಷನ್ ಗೆ ಹೋಗಬೇಕು.

ಶ್ರೀಧರ - ಫಂಕ್ಷನ್ ಗೆ ಹೋಗೋದೇನೋ ಸರಿ, ಆದರೆ ನನಗೆ ಸಾವಿತ್ರಿ ಯಾವ ಸೀರೆ ಉಟ್ಕೊಂಡಿರ್ತಾಳೋ ಅಂತ ಯೋಚಿಸಿ, ಯೋಚಿಸಿ, ಇವತ್ತು ನಿದ್ದೇನೇ ಬರಲ್ಲ.

ಲತ - (ಪಟ್ ಅಂತ) ನಿಮ್ಮ ನಿದ್ದೆಗೂ ಸಾವಿತ್ರಿ ಸೀರೇಗೂ ಏನ್ ಸಂಬಂಧ?

ಶ್ರೀಧರ - (ನಿಧಾನಿಸ್ತಾ) ಅಲ್ಲಾ, ಅವಳು ಉಟ್ಟಂತ ಸೀರೇನೇ ನಿನಗೂ ಆಸೆ ಆಗೋದು, ಆಮೇಲೆ ಅದು ಸಿಗದೇ ಇರೋದು, ಆದ್ರೆ, ಏನು ಮಾಡೋದು?

ನಾನು, ಲತಾ ಎಲ್ಲರೂ ನಗೆಗಡಲಿನಲ್ಲಿ ತೇಲಾಡಿದ್ದು ಇಂದೂ ನೆನಪಿದೆ.

17. ನನ್ನ ಕಲ್ಪನೆಯಲ್ಲಿ ನನ್ನ, ಲತನ ಸಂಭಾಷಣೆ.

ಲತನ ಜೊತೆ ಮಾತು ಕಥೆ ನಾನು ಐವತ್ತು ವರ್ಷಗಳಿಂದ ಎಂಜಾಯ್ ಮಾಡಿದೀನೇ ಹೊರತು, ನೋಟ್ ಮಾಡಿಕೊಂಡಿಲ್ಲವಲ್ಲ ಅನ್ನೋ ಕೊರಗು ಈಗ ನನಗೆ. ನೆನಪು ಮಾಡಿಕೊಳ್ಳಲು ಹೊರಟಾಗ ಹೊಳೆದದ್ದು ಹದಿನಾರು ಮಾತ್ರ. ಈಗ ಲತನ ಜೊತೆಯಲ್ಲೊಂದು ಕಲ್ಪನೆಯ ಸಂಭಾಷಣೆ.

ಸಂಧ್ಯಾ - ಅಂತೂ ಲತಾ, ನನಗೆ ಐವತ್ತಕ್ಕೆ ಹದಿನಾರು ಮಾರ್ಕ್ಸ್ ಆದರೂ ಸಿಗ್ತಲ್ಲಾ. ಸೊನ್ನೆ ಆಗಲಿಲ್ಲವಲ್ಲ.

ಲತ - ಪೆದ್ದಮ್ಮ, ಅದು ಐವತ್ತಕ್ಕೆ ಹದಿನಾರು ಅಲ್ಲ ಕಣೆ, ಐನೂರಕ್ಕೆ ಹದಿನಾರು.

ಸಂಧ್ಯಾ - ಅದು ಹೇಗ್ರೀ ಲತಾ?

ಲತ - ಇನ್ನೇನ್ ಮತ್ತೆ? ವರ್ಷಕ್ಕೆ ಒಂದು ಹತ್ತಾದ್ರೂ ಮಾತು ಬರೀಬೇಕು ಅಂದ್ಕೊಂಡ್ರೆ ಐವತ್ತು ವರ್ಷಕ್ಕೆ ಐನೂರು ಆಗಲಿಲ್ಲವೇ?

ಸಂಧ್ಯಾ - ಹಾಗಾದ್ರೆ ಎಷ್ಟು ಪರ್ಸೆಂಟ್ ಆಯ್ತು ಲತಾ?

ಲತ - ಈ ದರಿದ್ರ ಪರ್ಸೆಂಟೇಜ್ ಎಲ್ಲಾ ನಾನ್ಯಾಕೆ ಲೆಕ್ಕ ಹಾಕ್ಲಿ? ನೀನೇ ಹಾಕ್ಕೋ.

18. ಈ ದಿನ ನಾನು ನಾದಾರ್ಚನೆ ಸದಸ್ಯರೆಲ್ಲರ ಮುಂದೆ ಒಂದು ಬೇಡಿಕೆ ಇಟ್ಟಿದ್ದೆ. ಅದನ್ನು ಅವರಿಗೆ ತಿಳಿಸುವಾಗ ಹೀಗೆ ಹೇಳಿದೆ.

ಸಂಧ್ಯಾ - ಇದುವರೆಗೂ ನಾದಾರ್ಚನೆಯಲ್ಲಿ ಲತನ ಮಾತಿಗೆ ಕೆಲವು ಸಂದರ್ಭಗಳಲ್ಲಿ ನಾವೆಲ್ಲಾ ತುಂಬಾ ನಕ್ಕಿರೋದು ಉಂಟು. ಆ ಸಿಚುಯೇಶನ್ ಯಾರಿಗಾದರೂ ನೆನಪಿದ್ದಲ್ಲಿ ಅಥವಾ ನೆನಪಿಸಿಕೊಳ್ಳಲು ಪ್ರಯತ್ನಿಸಿ, ನೆನಪಾದರೆ, ನನಗೆ ತಿಳಿಸಿ. ನಗುಬರೋದು ಅಂತಾನೇ ಅಲ್ಲ, ಯಾವಾಗಲಾದರೂ ಲತ ಏನಾದರೂ ತುಂಬಾ ಚೆನ್ನಾಗಿ ಮಾತಾಡಿ, ಅದು ಎಲ್ಲರಿಗೂ ಇಷ್ಟ ಆಗಿರತ್ತೆ. ಅಂತದ್ದನ್ನ ನೆನಪಿಸಿಕೊಂಡು ನನಗೆ ಹೇಳಿ.

ಲತ - (ತಕ್ಷಣ ಪಟ್ ಅಂತ) ಯಾಕೆ? ಯಾವಾಗಲಾದರೂ ಒಂದೊಂದು ಸಲ ಮಾತ್ರಾನೇನಾ ನಾನು ಚೆನ್ನಾಗಿ ಮಾತಾಡೋದು?

ಮತ್ತೆ ಎಂದಿನಂತೆ ಎಲ್ಲರೂ ಲತನ ಮಾತನ್ನು ಕೇಳಿ ಎಂಜಾಯ್ ಮಾಡಿದ್ದಲ್ಲದೆ, ಸಂಧ್ಯೂ ಇದನ್ನೂ ಬರ್ಕೋ ಅಂತ ಒಕ್ಕೊರಲಲ್ಲಿ ಬೇರೆ ಹೇಳಿದ್ದು ತುಂಬಾ ತಮಾಷೆಯಾಗಿತ್ತು.

19. ಇಂದು ನಾದಾರ್ಚನೆಯಲ್ಲಿ ಪುರಂದರ ದಾಸರ ಒಂದು ಗೀತೆಯನ್ನು ಎಲ್ಲರೂ ಪ್ರಾಕ್ಟೀಸ್ ಮಾಡ್ತಿದ್ರು. ಆದರೆ ಕೊನೆಯಲ್ಲಿ ಸಾಹಿತ್ಯ ಸ್ವಲ್ಪ ಡಿಫರ್ ಆಯ್ತು. ಯಾವುದು ಸರಿ, ಯಾವುದು ತಪ್ಪು ಅನ್ನೋ ಮಾತು ಕೇಳಿಬಂತು. ತಕ್ಷಣ ಲತ ಪಟ್ ಅಂತ ಹೇಳಿದ್ದು, "ಜಸ್ಟಿಫೈ ಮಾಡಕ್ಕೆ ಪುರಂದರ ದಾಸರು ಇಲ್ಲವಲ್ಲಾ, ಯೂನಿಫಾರ್ಮಿಟಿ ಗಾಗಿ ಒಂದೇ ತರ ಸಾಲನ್ನ ಎಲ್ಲರೂ ಕಲಿಯೋಣ" ಅಂದ್ರು. ಎಂದಿನಂತೆ ಎಲ್ಲರಿಗೂ ಇಷ್ಟವಾಯಿತು ಲತನ ಮಾತು.

20. ನಾನೂ ಲತಾ ಸಿನಿಮಾ ನೋಡಿ ಬಂದ ಮೇಲೆ ಅದರ ಬಗ್ಗೆ ಡಿಸ್ಕಸ್ ಮಾಡೋದು ನಡೀತಾನೇ ಇರ್ತಿತ್ತು. "ರಾಮ್ ತೇರಿ ಗಂಗಾ ಮೈಲಿ" ಸಿನಿಮಾ ನೋಡಿ ಬಂದಿದ್ವಿ ಅನ್ಸತ್ತೆ. ಹೀರೋಯಿನ್, ಹೀರೋ ಅಪ್ಪನಿಗೆ ಒಪ್ಪಿಗೆ ಆಗದೆ, ಮದುವೆಗೆ ಅಪೋಸ್ ಮಾಡಿದ್ರ ಬಗ್ಗೆ ನಮ್ಮ ವಾದ ವಿವಾದ ನಡೀತಾ ಇತ್ತು. ಅಪ್ಪನೇ ಅಷ್ಟು ದೊಡ್ಡ ವಿಲನ್ ಟೈಪ್ ಆಗಬಾರದು ಅಂತ ನಾನು ಹೇಳ್ತಾ ಇದ್ದೆ. ಅದಕ್ಕೆ ಪಟ್ ಅಂತ ಲತ ನನಗೆ ಅರ್ಥ ಆಗಕ್ಕೆ ಒಂದು ಉದಾಹರಣೆ ಹೇಳಿದ್ದು ನನಗೆ ನಕ್ಕು ನಕ್ಕು ಸಾಕಾಯಿತು. ಲತನ ಅಮ್ಮನ ಮನೇಲಿ ಆ ಕಾಲದಲ್ಲಿ ಚಂದ್ರಿ ಅಂತ ಮನೆ ಕೆಲಸಕ್ಕೆ ಒಂದು ಹುಡುಗಿ ಬರ್ತಾ ಇತ್ತು. "ಚಂದ್ರೀನ ನರಸಿಂಹ

ಮದುವೆ ಮಾಡ್ಕೊಂಡ್ರೆ ಪಪ್ಪ ಸುಮ್ನೆ ಇರ್ತಾರೇನೇ ಸಂಧ್ಯಾ" ಅಂದಿದ್ದೇ ನನ್ನ ನಗುವಿಗೆ ಕಾರಣ, ಜೊತೇಗೆ ಪಾಠನೂ ತಲೇಗೆ ಹೋಯ್ತು.

21. ನಾನೂ ಲತಾ ಸಿನಿಮಾ ಬಗ್ಗೆ, ಸಿನಿಮಾದವರ ಬಗ್ಗೆ ಮಾತಾಡೋದು ಸಾಮಾನ್ಯವಾಗಿ ನಡೀತಾನೇ ಇರ್ತಿತ್ತು. ನಾನೆಲ್ಲೋ ಓದಿದ್ದು ಹೇಳೋದು, ಅವರು ಥಟ್ ಅಂತ ರಿಯಾಕ್ಟ್ ಮಾಡಿದ್ರೆ, ನಾನು ಅದನ್ನ ಎಂಜಾಯ್ ಮಾಡೋದು ತುಂಬಾ ಇತ್ತು. ಅಂತಹ ಒಂದು ಉದಾಹರಣೆ ಇದು.

ಸಂಧ್ಯಾ - ಪುಟ್ಟಣ್ಣ ಕಣಗಾಲ್ ಇಂದಾನೇ 100% ಆರತಿ Famous ಆಗಿದ್ದು.

ಲತ - Director contribution ಇರತ್ತೆ, ಇಲ್ಲಾ ಅಂತಲ್ಲ, ಆದ್ರೆ 100% ಅಲ್ಲ.

ಸಂಧ್ಯ - ಆದ್ರೂ ಎಂತೆಂಥಾ ಡೈಲಾಗ್ಸ್ ಗಳನ್ನ ಹೇಳೋ ರೀತಿ, ಎಲ್ಲಾ ತುಂಬಾ ಹೇಳ್ಕೊಟ್ಟಿದ್ರಂತೆ ಲತಾ.

ಲತ - (ಪಟ್ ಅಂತ) ಡೈಲಾಗ್ಸ್ ಹೇಳಿಕೊಟ್ರೂನೂ ಆರತಿನೇ ಬೆಬ್ಬೆಬ್ಬೇ ಅಂದಿದ್ರೆ?

ಸಂಧ್ಯಾ - (ನಗು)

ಲತ - ನನ್ನಿಂದಾನೇ ಎಲ್ಲಾ ಅಂತ ಅನ್ಕೊಳ್ಳೋದು ಮನುಷ್ಯರ ಒಂದು ವೀಕ್ನೆಸ್ ಅಷ್ಟೆ.

ಸಂಧ್ಯಾ - **ಮೌನ.**

22. ನಾದಾರ್ಚನೆಯಲ್ಲಿ ಒಂದು ದಿನ ನಾನು ಸೌಭಾಗ್ಯ ಅವರಿಗೆ ಕಲಿತುಕೊಂಡು ಹೇಳಿ ಅಂತ "ಮೈ ತೊ ಭೂಲ್ ಚಲೀ ಬಾಬುಲ್ ಕಾ ದೇಶ್" ಹಾಡನ್ನು ಸೆಲೆಕ್ಟ್ ಮಾಡಿ ಕೊಟ್ಟೆ. ಆ ಹಾಡು ಅವರು ಹೇಳಲಿ ಅನ್ನೋ ನಿನ್ನ ಆಸೆ ಸರಿಯಿಲ್ಲ ಎಂಬ ಲತನ ಅಭಿಪ್ರಾಯ, ಇಡೀ ಗುಂಪಿನಲ್ಲಿ ಆರೋಗ್ಯಕರ ವಾದ ವಿವಾದ ಚರ್ಚೆಗೆ ಕಾರಣವಾಗಿ ಲತನಿಂದಾಗಿ ಅದನ್ನು ಎಲ್ಲರೂ ಎಂಜಾಯ್ ಮಾಡಿ, ಕೊನೇಗೆ ಲತ ಆ ಟಾಪಿಕ್ ನ conclude ಮಾಡಕ್ಕೆ, ಅವರದೇ ಆದ ಸ್ಟೈಲ್ ನಲ್ಲಿ ಹೇಳಿದ ಡೈಲಾಗ್ ನಿಂದ ಎಲ್ಲರೂ ನಗೆಗಡಲಿನಲ್ಲಿ ತೇಲಾಡಿದ್ದಾಯಿತು. ಅವರ ಮಾತು ಹೀಗಿತ್ತು.

ಲತ - "ಪಿಯಾ ಕಾ ಘರ್ ಪ್ಯಾರಾ ಲಗೆ" ಅಂತ ಎಷ್ಟಾದ್ರೂ ಅರಚಿಕೊಳ್ಳಲಿ, ಆದರೆ "ಮೈ ತೊ ಭೂಲ್ ಚಲೀ ಬಾಬುಲ್ ಕಾ ದೇಶ್" ಅಂತ ಯಾಕೆ ಹೇಳ್ಬೇಕು?

23. ನನ್ನ ಬಾವನ ಚಿಕ್ಕಮ್ಮನ ಮಗಳು ಸುಧಾ ನೋಡಕ್ಕೆ ತುಂಬಾ ಚೆನ್ನ. ಎತ್ತರವಾಗಿ, ಬೆಳ್ಳಗೆ, ಕಾದಂಬರಿಯ ವರ್ಣನೆ ತರಾ ಉದ್ದ ಹಾಗೂ ದಪ್ಪ ಜಡೆ. ಆದರೆ ಅವಳು ತುಂಬಾ Silent. ಮಾತು ಕಡಿಮೆ ಅಂತಾನೇ Famous. ಕಾಲೇಜಿನ ದಿನಗಳಲ್ಲಂತೂ ಸುಧಾ ಗೊತ್ತಾ ಅಂದರೆ, "ಅದೇ, She never opens her mouth, ಅವಳಾ" ಅಂತಾನೇ ಕೇಳ್ತಿದ್ರು. ಆಡು ಮುಟ್ಟದ ಸೊಪ್ಪಿಲ್ಲ ಎನ್ನುವಂತೆ, ನನ್ನ ಮತ್ತು ಲತನ ಮಾತಿಗೆ ಸಿಗದವರೇ ಇಲ್ಲ.

ಸಂಧ್ಯಾ - ಅಲ್ಲ, ಲತ, ಆ ಸುಧಾ ಅಷ್ಟೊಂದು Silent, ಆದ್ರೆ ಅವಳ ವಿಷಯದ ತಂಟೆಗೆ ಯಾರು ಹೋದ್ರೂ ಅವಳು ಸುಮ್ಮನಿರಲ್ವಂತೆ. ಬೇರೆ ಸಮಯದಲ್ಲಿ ಮಾತ್ರ Silent ಅಂತೆ.

ಲತ - (ಪಟ್ ಅಂತ) ಪೆದ್ ಪೆದ್ದಾಗಿ ಆಡ್ಬೇಡ ಸಂಧ್ಯ, ನಮ್ ತಂಟೆಗೆ, ನಮ್ ವಿಷಯಕ್ಕೆ ಯಾರಾದ್ರೂ ಬಂದ್ರೆ ನಮ್ಗೆ ಇಷ್ಟ ಆಗತ್ತೇನೇ? ಎಲ್ಲಾರ್ಗೂ ಹಾಗೇ ಇರತ್ತೆ. ಅದ್ರಲ್ಲೇನು Special ಅಂತ ಹೇಳ್ತಾ ಇದೀ?

ಸಂಧ್ಯಾ - (ಹೌದಲ್ವಾ) **ಮೌನ.**

24. ಹೀಗೊಂದು ಲತ ಮತ್ತು ಜಯ ಸಂಭಾಷಣೆ.

ಜಯ - ಅಂತು ಎಷ್ಟು ಚಿಕ್ಕ ವಯಸ್ಸು ನಿನಗೆ. ಇಷ್ಟು ಚಿಕ್ಕ ವಯಸ್ಸಿಗೆ ಮಕ್ಕಳ ಜವಾಬ್ದಾರಿ ಯಾರೂ ಮುಗಿಸಿರಲ್ಲ. ನೀನು ಮಾತ್ರ ಮುಗಿಸಿಕೊಂಡುಬಿಟ್ಟೆ, ಅದೃಷ್ಟವಂತೆ, etc etc...

ಲತ - (ಪಟ್ ಅಂತ) ಅಯ್ಯೋ ಜಯ, ಚಿಕ್ಕವಯಸ್ಸಿಗೆ ಎಲ್ಲಾ ಜವಾಬ್ದಾರಿ ಮುಗಿಸಿದೆ ಅಂತ ಹೇಳೋರ ಸಂಖ್ಯೆ ಜಾಸ್ತಿ ಆಗ್ತಾ ಇದ್ಯೇ ಹೊರತು, ಎಷ್ಟು ಚಿಕ್ಕ ವಯಸ್ಸಿಗೆ ಜವಾಬ್ದಾರಿ ತೆಗೆದುಕೊಂಡಿದ್ದೆ ಅಂತ ಹೇಳೋರು ಮಾತ್ರ ಇದುವರೆಗೂ ಒಬ್ರೂ ಸಿಕ್ಕಿಲ್ವಲ್ಲ?

ಜಯ - (ನಿರರ್ಗಳ ಮಾತುಗಾರ್ತಿ) **ಮೌನ.**

25. ಪುಟಾಣಿ ಅಪ್ಪಿಯನ್ನು ಮುದ್ದು ಮಾಡದವರಿಲ್ಲ. ಆದರೆ ಸಂಪೂರ್ಣ ಜವಾಬ್ದಾರಿ ಲತನದೇ ಆಗಿತ್ತು. ಪುಟ್ಟ ಅಪ್ಪಿಗೆ ಕೋಪ, ಹಠ ಜಾಸ್ತಿ. ಅಂತಹದೇ ಒಂದು ಘಟನೆ ನನ್ನ ನಗುವಿಗೆ ಕಾರಣವಾಗಿತ್ತು.

ಪುಟಾಣಿ ಅಪ್ಪಿಗೆ ಬಂದಿತ್ತು ಕೆಂಡದಂತ ಕೋಪ.

ಪುಟ್ಟ ಅಪ್ಪಿ - (ಕೋಪದಿಂದ) ನಾನು ಮನೆ ಬಿಟ್ಟು ಹೋಗ್ತೀನಿ.

ಸಂಧ್ಯ - (ನಗು)

ಲತ - (ವಿಚಲಿತರಾಗದೆ ಥಟ್ ಅಂತ) ಹೋಗು.

ಪುಟ್ಟ ಅಪ್ಪಿ - ಸೂಟ್ ಕೇಸ್ ಗೆ ಬಟ್ಟೆ ತುಂಬ್ಕೊಡಮ್ಮ.

ಸಂಧ್ಯ - (ನಕ್ಕಿದ್ದೇ ನಕ್ಕಿದ್ದು)

ಲತ - (ಥಟ್ ಅಂತ) ನಾನ್ಯಾಕೆ ತುಂಬ್ಲಿ? ಮನೆ ಬಿಟ್ಟು ಹೋಗಕ್ಕೆ ಹೇಳಿದ್ದು ನಾನಾ? ನೀತಾನೇ ಹೇಳ್ತಿರೋದು ಹೋಗ್ತೀನಿ ಅಂತ, ನೀನೇ ತುಂಬ್ಕೊ.

26. ಎಂದಿನಂತೆ ಲತನ ಸಡಗರದ ಕಾರಣದಿಂದಾಗಿ ನಡೆಯುವ ಅನೇಕ ಸಮಾರಂಭಗಳಂತೆ ಇತ್ತೀಚೆಗೆ ಲತನ ಮನೆಯಲ್ಲಿ ನಡೆದಿದ್ದು ಅಜ್ಜಿಯ ಹಾಡಿನ ಪುಸ್ತಕದ ಬಿಡುಗಡೆ ಕಾರ್ಯಕ್ರಮ. ಲತನ ವಿಶಾಲ ಮನೋಭಾವದ ಕಾರಣದಿಂದಾಗಿ ಲತನ ಮನೆ ಅಜ್ಜಿಯ ಸಂಸಾರದ ಸದಸ್ಯರಿಂದ ತುಂಬಿ ಕಳೆಗಟ್ಟಿತ್ತು. ಸಮಾರಂಭದ ನಂತರದಲ್ಲೂ ಎಲ್ಲರೂ ನಮ್ಮಮ್ಮನ ಹಾಡುಗಳು, ಅವರ ದೈವಭಕ್ತಿ, ಅವರು ಮಾಡುತ್ತಿದ್ದ ಅಡುಗೆಗಳು ಮುಂತಾದ ವಿಷಯಗಳನ್ನು ಎಲ್ಲರೂ ಮಾತಾಡುತ್ತಿದ್ದರು. ನಮ್ಮ ಮನೆಯ ಮೊದಲ ಸೊಸೆಯಾದ ಕಮಲನ ಮಾತುಗಳು ತುಂಬಾ ಕೇಳಿಬಂದವು. ಅದರಲ್ಲೊಂದು ಅನಾಯಾಸವಾಗಿ “ಲತಾ ಉವಾಚ” ಬುಟ್ಟಿಗೆ ಬಂದು ಬಿತ್ತು. ಅದು ಹೀಗಿತ್ತು.

ಕಮಲ - ಅಮ್ಮ ಒಂತರ ಕೂಟು ಮಾಡ್ತಿದ್ರು. ಅದು ತುಂಬಾ ಚೆನ್ನಾಗಿರ್ತಿತ್ತು. ಆದರೆ ಸೌಭಾಗ್ಯ ಒಬ್ಬಳೇ ಅದನ್ನ ಕಲ್ತಿರೋದು.

ಲತ – (Within a fraction of a second) ಕಲ್ತಿರೋದು ಸೌಭಾಗ್ಯ ಒಬ್ಬಳೇ ಅಲ್ಲ. ನೀವ್ ತಿಂದಿರೋದು ಮಾತ್ರ ಬರೀ ಸೌಭಾಗ್ಯನ ಮನೇಲಿ.

ಕಮಲ, ಪದ್ಮ, ಸೌಭಾಗ್ಯ, ನಾನು ಎಲ್ಲರೂ ಲತನ ಮಾತಿಗೆ ನಕ್ಕಿದ್ದೇ ನಕ್ಕಿದ್ದು.

27. ನಾನು ಈ ಹಿಂದೆ ತಿಳಿಸಿದಂತೆ ನಾನು ಲತ ಮಾತನಾಡದ ವಿಷಯವಿಲ್ಲ. ಒಂದು ಸಲ ನಮ್ಮ ತಂದೆಯ ಏಳು ಜನ ಗಂಡು ಮಕ್ಕಳ ಬಗೆಗಿನ ನನ್ನ, ಲತನ ಮಾತು ಹೀಗಿತ್ತು.

ಸಂಧ್ಯ - ಅಲ್ಲ ಲತ, ಯಾರಾದ್ರು ಅವರಿಗೆ ಒಬ್ಬರೇ ಮಗ ಅನ್ನೋ ಮಾತು ಬಂದಾಗಲೆಲ್ಲಾ ನಮ್ಮಪ್ಪ ಏನ್ ರಿಯಾಕ್ಟ್ ಮಾಡ್ತಾ ಇದ್ರಂತೆ ಗೊತ್ತಾ?

ಲತ – ಏನು?

ಸಂಧ್ಯ - "ಒಂದ್ ಮಗ ಮಗ ಅಲ್ಲ, ಒಂದ್ ಕಣ್ ಕಣ್ಣಲ್ಲ" ಅಂತ ಹೇಳ್ತಾ ಇದ್ರಂತೆ.

ಲತ – (ಪಟ್ ಅಂತ) ಅದಕ್ಕೆ ಇಲ್ಲಿ ಏಳೂ ಕುರುಡು.

ಸಂಧ್ಯ - (ನಕ್ಕಿದ್ದೇ ನಕ್ಕಿದ್ದು)

ಇಲ್ಲಿ ಲತನ ಮಾತಿನ ಅರ್ಥ ಲಿಟರಲ್ ಆಗಿ ಕುರುಡು ಅಂತ ಅಲ್ಲ. "Small family happy family" ಅನ್ನೋ message ಅವರ ಮಾತಲ್ಲಿತ್ತು ಅಷ್ಟೆ. (Like social studies book).

ಇದುವರೆಗೂ ಸಂಧ್ಯಾರವರು ಲತಾ ಅವರ ಬಗ್ಗೆ ಹಂಚಿಕೊಂಡ ಸಂದರ್ಭಗಳನ್ನು ಓದಿದಿರಿ. ಈಗ ನಾದಾರ್ಚನೆಯಲ್ಲಿ ನಡೆದ ಒಂದು ಪ್ರಸಂಗ.

**1.** ಲತಾ ಅವರಿಗೆ, ತ್ಯಾಗರಾಜರ ಆರಾಧನೆಗೆ ನಾದಾರ್ಚನೆಯ ಸದಸ್ಯರೆಲ್ಲಾ ಸೇರಿ, ಪಂಚರತ್ನ ಕೃತಿಗಳನ್ನ ಹಾಡಬೇಕೆಂಬ ಸಂಕಲ್ಪ ಮೂಡಿಬಂತು. ಸರಿ, ಇನ್ನೇನಿದೆ? ಅವರು ಯಾವತ್ತೂ ಯಾವ ಕೆಲಸ ಮಾಡಿದರೂ ಅದಕ್ಕೆ ಸಂಪೂರ್ಣವಾಗಿ, ಶಕ್ತಿವಂಚನೆ ಇಲ್ಲದೇ ಪರಿಶ್ರಮ ಪಡುವ ಸ್ವಭಾವ ಉಳ್ಳವರು. ನಮಗೆಲ್ಲಾ ಸಂಗೀತ ಪಾಠ ಹೇಳಲು ಶ್ರೀಮತಿ ರೇಖಾ ಅವರು ಸಮಯದ ಅಭಾವವಿದ್ದರೂ, ನಮಗೆಲ್ಲಾ ಸಂಗೀತವನ್ನು ಹಾಡಿ ಗೊತ್ತಿಲ್ಲದೇ ಇದ್ದರೂ ಒಪ್ಪಿದರು. ಸಂಗೀತ ಪಾಠ ಆರಂಭವಾಯಿತು. ನಮ್ಮ ಸಂಗೀತ ಕೇಳುವ ಪರಿಸ್ಥಿತಿ ಶ್ರೀಧರ್ ಅವರ ಪಾಲಿಗೆ ಬಂತು. ತ್ಯಾಗರಾಜರ ಹೆಸರು ಕೇಳಿ ಕೇಳಿ, ಒಮ್ಮೆ ನಾನು ಫೋನ್ ಮಾಡಿದಾಗ ಅವರು "ತ್ಯಾಗರಾಜಾ ಹಿಯರ್" ಎಂದರು. ನನಗಂತೂ ನಗು ತಡೆಯಲು ಆಗಲೇ ಇಲ್ಲ. ಹೀಗೇ ನಮ್ಮ ಪಂಚರತ್ನ ಕೃತಿಗಳ ಕಲಿಕೆ ಒಂದೂವರೆ ತಿಂಗಳಕಾಲ ನಡೆಯಿತು. ನಮಗಿಂತಲೂ ಚೆನ್ನಾಗಿ ಶ್ರೀಧರ್ ಅವರಿಗೆ ಎಲ್ಲಾ ಹಾಡುಗಳೂ ಕಂಠಪಾಠವಾದವು. ಅವರು ಹಾಕುವ ಶಿಳ್ಳೆಯಲ್ಲೂ ಆ ಹಾಡುಗಳೇ ಪ್ರತ್ಯಕ್ಷವಾದವು. "ಎಂದರೋ ಮಹಾನುಭಾವುಲು" ಅಂತ ನಮ್ಮೆಲ್ಲರ ವಿಧವಿಧವಾದ ಹಾಡುವಿಕೆಯನ್ನು ಕೇಳಿ ಅವರಿಗೆ ಗ್ರಾಮಫೋನ್ ನಲ್ಲಿ ಆರ್.ಪಿ,ಎಮ್ ಬದಲಿಸಿದರೆ ಹಾಡು ಹೇಗೆ ಕೇಳುತ್ತೋ ಹಾಗೇ ಅನ್ನಿಸಿದ್ದರಲ್ಲಿ



ಆಶ್ಚರ್ಯವಿಲ್ಲ. ನಂತರ ಲತಾ ಅವರಿಗೆ ತ್ಯಾಗರಾಜರು ಏನು ಊಟ ತಿಂಡಿ ಸೇವಿಸ್ತಾ ಇದ್ದರೋ ಅದನ್ನೇ ನಾವೂ ಸೇವಿಸಿದರೆ ಹಾಡುವುದು ಚೆನ್ನಾಗಿ ಬರುತ್ತದೇನೋ ಅಂತ ಐಡಿಯಾಬಂತು. ಅದಕ್ಕೇ ಶ್ರೀಧರ್ ಅವರು ಕೂಡಲೇ "ಏನು ಬೇಕಾದರೂ ತಿನ್ನಿ, ಆದರೆ ಸರಿಯಾಗಿ ಹಾಡಿ" ಎಂದರು. ನಾವಲ್ಲಾ ಕೂಡಲೇ ಜೋರಾಗಿ ನಕ್ಕಿದ್ದೇ ನಕ್ಕಿದ್ದು.

ನಂತರ ಲತಾ ಅವರು ತ್ಯಾಗರಾಜರ ಚಿತ್ರಗಳನ್ನು ಬರೆದರು. ಮೊದಲನೇ ಚಿತ್ರದಲ್ಲಿ ಶ್ರೀರಾಮನನ್ನು ಭಕ್ತಿಯಿಂದ ನೋಡುತ್ತಾ ಹಾಡುತ್ತಿರುವ ತ್ಯಾಗರಾಜರನ್ನೂ ಮತ್ತು ಅವರನ್ನು ಕೃಪಾದೃಷ್ಟಿಯಿಂದ ನೋಡುತ್ತಿರುವ ಆ ಕೋದಂಡರಾಮನನ್ನೂ ಅವರು ಬಹಳ ಸುಂದರವಾಗಿ ಚಿತ್ರಿಸಿದ್ದರು. ಅದನ್ನು ನೋಡಿ ಶ್ರೀಧರ್ ಅವರು "ಆಹಾ ಸಿಕ್ಸ್ ಪ್ಯಾಕ್ ತ್ಯಾಗರಾಜ" ಎಂದು ಎಲ್ಲರನ್ನೂ ನಗೆಗಡಲಿನಲ್ಲಿ ಮುಳುಗಿಸಿದರು.

2. ಒಮ್ಮೆ ಲತಾ ಅವರು ತಿರುಪತಿಗೆ ಹೋದಾಗ ನನ್ನನ್ನೂ ಕರೆದುಕೊಂಡು ಹೋಗಿದ್ದರು. ಕ್ಯೂನಲ್ಲಿ "ಗೋವಿಂದಾ ಗೋವಿಂದಾ" ಅಂತ ಹೇಳಿಕೊಳ್ತಾ, ನಿಧಾನವಾಗಿ ಮುಂದೆ ಸರಿಯುತ್ತಿದ್ದ ಸಾಲಿನಲ್ಲಿ ನಾವೂ ಹೆಜ್ಜೆ ಹಾಕುತ್ತಾ ಇದ್ದೆವು. ಯಾವುದೇ ಕ್ಷೇತ್ರಕ್ಕೆ ಹೋದರೂ ಲತಾ ಅವರು, ಮೊದಲೇ ಆ ಕ್ಷೇತ್ರದ ಬಗ್ಗೆ ಎಲ್ಲಾ ಮಾಹಿತಿಗಳನ್ನೂ ತಿಳಿದಿರುತ್ತಿದ್ದರು. ಕ್ಯೂನಲ್ಲಿ ನಡೆಯುತ್ತಾ ನನಗೆ ಅವರು ಪ್ರವೇಶ ದ್ವಾರದ ಬಳಿ ಇರುವ ಅನಂತಾಚಾರ್ಯರ ದೊಡ್ಡ ಹಾರೆಯ ಬಗ್ಗೆ ಹೇಳುತ್ತಾ, ಒಮ್ಮೆ ತೋಟದಲ್ಲಿ ಹೇಗೆ ಆಕಸ್ಮಿಕವಾಗಿ ಹಾರೆ ತಗುಲಿ, ಶ್ರೀನಿವಾಸನ ಗಲ್ಲಕ್ಕೆ ಪೆಟ್ಟಾಯಿತು ಎಂಬ ಕಥೆಯನ್ನು ನನಗೆ ಹೇಳುತ್ತಿದ್ದರು. ಅಂದು ಕ್ಯೂನಲ್ಲಿ ತುಂಬಾ ಜನ ಅಯ್ಯಪ್ಪ ಸ್ವಾಮಿಯ ಭಕ್ತರಿದ್ದರು. ಅವರೆಲ್ಲಾ ರೂಡಿಯಂತೆ ಕಪ್ಪು ಬಣ್ಣದ ಬಟ್ಟೆ ಧರಿಸಿದ್ದರು. ನಮ್ಮ ಮುಂದೆ ಇದ್ದ ಅಂಥಾ ಒಬ್ಬರು ಭಕ್ತರು ಲತ ಅವರ ಮಾತನ್ನು ಕೇಳಿ, ತುಂಬಾ ಸಂತೋಷ ಪಟ್ಟು, ತೆಲುಗು ಭಾಷೆಯಲ್ಲಿ ಹೇಳಿದರು, "ಆಹಾ ಕನ್ನಡ ತಲ್ಲಿ, ಎಂತ ಬಾಗಾ ಚೆಪುತೋಂದಿ" ಅಂತ. ಲತ ಅವರು ಹೇಳುವ ಎಲ್ಲಾ ಮಾತುಗಳನ್ನು ಶ್ರದ್ಧೆಯಿಂದ, ಭಕ್ತಿಯಿಂದ ಕೇಳಿದರು. ಎಷ್ಟೋ ಸರ್ತಿ ಸರಿಯಾದ ಮಾಹಿತಿಯಿಲ್ಲದೇ ಮುಖ್ಯವಾದದ್ದನ್ನು ನಾವು ಆ ಕ್ಷೇತ್ರಕ್ಕೆ ಹೋಗಿಯೂ ಸಹಾ ನೋಡುವುದನ್ನು ಮಿಸ್ ಮಾಡಿಬಿಡುತ್ತೇವೆ ಎಂದರು. ಹೀಗೇ ಮುಂದೆ ಸರಿಯುತ್ತಾ ಕಡೆಗೆ ನಾವು ಪ್ರವೇಶ ದ್ವಾರದ ಬಳಿ ಬಂದೆವು. ಲತ ಅವರು ನನಗೆ ಬಲ ದ್ವಾರದ ಮೇಲಿದ್ದ ಹಾರೆಯನ್ನು ತೋರಿಸಿ, ಮುಂದೆ ನಿಂತಿದ್ದ ಕಪ್ಪು ಬಟ್ಟೆ ವ್ಯಕ್ತಿಯನ್ನು ತಟ್ಟಿ, "ನೋಡಿ, ನೋಡಿ, ಅದೇ ಅನಂತಾಚಾರ್ಯರ ಹಾರೆ" ಎಂದರು. ಪಾಪ ಅದು ಬೇರೇ ಯಾರೋ ಅಯ್ಯಪ್ಪ ಭಕ್ತರು. ಅವರು ಅಯೋಮಯವಾಗಿ ಲತ ಅವರನ್ನು ನೋಡಿದರು. ನಮ್ಮೊಡನೆ ಮಾತಾಡುತ್ತಿದ್ದವರು ಸಾಲಿನಲ್ಲಿ ಮುಂದೆ ಎಲ್ಲೋ ಇದ್ದರೇನೋ. ಲತ ಅವರ ಮುಖ ಪೂರ್ತಿ ಕೆಂಪಗಾಯ್ತು.

ನನಗೆ ನಗು ತಡೆಯಲಾಗಲಿಲ್ಲ. ಇಬ್ಬರೂ ನಕ್ಕಿದ್ದೇ ನಕ್ಕಿದ್ದು. ನಗು ನಗುತ್ತಾ ಶ್ರೀನಿವಾಸನ ದರ್ಶನ ಮಾಡಿ ಪುನೀತರಾದೆವು.

3. ನಾದಾರ್ಚನೆಯಲ್ಲಿ ನಡೆದ ಮತ್ತೊಂದು ಪ್ರಸಂಗ. ನಾವೆಲ್ಲಾ ತ್ಯಾಗರಾಜರ ಪಂಚರತ್ನ ಕೃತಿಗಳನ್ನು ಕಲಿಯಲು ನಿರಂತರವಾಗಿ ಪ್ರಾಕ್ಟೀಸ್ ಮಾಡುತ್ತಿದ್ದ ಕಾಲ. ಎಷ್ಟು ಬಾರಿ ಕೇಳಿದರೂ, ಜೊತೆಯಲ್ಲಿ ಹಾಡಿದಾಗ ಸರಿಯಾಗಿದೆ ಎನಿಸಿದರೂ, ನಾವೇ ಹಾಡಲು ಹೋದಾಗ ಬೇರೆ ತರಹವೇ ಕೇಳಿಸ್ತಾ ಇತ್ತು ರಾಗ. ಪರವಾಗಿಲ್ಲ, ಚೆನ್ನಾಗೇ ಹಾಡಿದ್ರಿ ಅಂತ ಪರಸ್ಪರ ಒಬ್ಬರನ್ನೊಬ್ಬರು ಬೆನ್ನು ತಟ್ಟಿಕೊಂಡು ಕಲಿಯುವ ಸಾಹಸವನ್ನು ಮುಂದುವರೆಸ್ತಾ ಇದ್ವಿ. ಆಗ ಒಮ್ಮೆ ಅರ್ಚನಾ ಅವರು ನಮ್ಮ ಕಾರ್ಯಕ್ರಮದಲ್ಲಿ ಭಾಗವಹಿಸಿ, ಶಿವನ ಸಂಕೀರ್ತನೆ, ಹರಿಯ ಮಹಿಮೆಯನ್ನು ಹೊಗಳುವ ದೇವರನಾಮಗಳು ಎಲ್ಲವನ್ನೂ ಸುಶ್ರಾವ್ಯವಾಗಿ ಹಾಡಿದರು. ನಮಗೆಲ್ಲಾ ಸಂತೃಪ್ತಿ, ಸಂತೋಷ ಎಲ್ಲಾ ಉಕ್ಕಿ ಬಂತು. ಆಗ ಸೌಭಾಗ್ಯ ಅವರು ಥಟ್ ಅಂತ ಹೇಳಿದರು, **"ಇದು ಸಂಗೀತ".** ಎಲ್ಲರೂ ಕೂಡಲೇ ನಕ್ಕಿದ್ದೇ ನಕ್ಕಿದ್ದು.

ಈಗ **ಶ್ರೀಮತಿ ಮಾಲಾರವರ** ಅನುಭವಗಳನ್ನ ಅವರ ನುಡಿಗಳಲ್ಲಿ ಕೇಳೋಣ ಬನ್ನಿ.

**॥ಶ್ರೀ ವಿನಾಯಕ ಶಾರದಾ ಗುರುಭ್ಯೋ ನಮಃ॥**

ಲತ, ನನ್ನ ಹಿರಿಯಕ್ಕ, ವಯಸ್ಸಿನಲ್ಲಿ ಸ್ವಲ್ಪ ಅಂತರವಿದ್ದಿದ್ದರಿಂದ ನಮಗೆ ಅವಳನ್ನು ಕಂಡರೆ ಭಯ. ಆದರೆ ನಾನು ಮೈಸೂರಿಗೆ ಬಂದ ನಂತರ ಅವಳ ಒಡನಾಟ ಹೆಚ್ಚಾಗಿ, ಅವಳಲ್ಲಿರುವ ಸದ್ಗುಣಗಳು, ಅವಳು ತೋರಿಸಿದ ಅಕ್ಕರೆ, ಕಾಳಜಿ, ಮಮತೆಗಳಿಂದ ಆ ಭಯದ ಜೊತೆಗೆ ಅವಳಲ್ಲಿ ಪ್ರೀತಿ, ವಿಶ್ವಾಸ ಹೆಚ್ಚಾಯ್ತು.

ಹಲವು ಬಾರಿ ಅವಳ ಬಾಯಲ್ಲಿ ಅವಳಿಗೇ ಅರಿವಿಲ್ಲದಂತೆ ಬಂದ ಮಾತುಗಳು ಅಕ್ಷರಶಃ ನಿಜವಾದ ನಿದರ್ಶನಗಳೂ ಇವೆ. ಒಂದು ಬಾರಿ ನಮ್ಮನ್ನು ಬಾವ, ಲತ ಚಾಮುಂಡಿಬೆಟ್ಟಕ್ಕೆ ಕರೆದುಕೊಂಡು ಹೋಗಿದ್ದರು. ವಾಪಸ್ ಬರುವಾಗ ಶ್ರೀರಾಮನ ಆದರ್ಶಗಳು, ರಾಜ್ಯಪಾಲನೆ ಮುಂತಾದ ವಿಷಯಗಳು, ಈಗಿನ ಹೊಲಸು ರಾಜಕಾರಣ, ಎಲ್ಲವೂ ಮಾತಿಗೆ ಬಂತು. ಆಗ ನಾನು, "ಈಗಲೇ ಇಷ್ಟು ಅನ್ಯಾಯ, ಅಧರ್ಮಗಳು ನಡೆಯುತ್ತಿವೆ, ಇನ್ನು ನಮ್ಮ ಮಕ್ಕಳ, ಮೊಮ್ಮಕ್ಕಳ ಕಾಲಕ್ಕೆ ಏನು ಗತಿ" ಎಂದಾಗ ಲತ ಥಟ್ಟನೆ "ಇಲ್ಲವೇ ಮಾಲ, ಮುಂದೊಂದು ದಿನ ಮತ್ತೆ ವಿವೇಕಾನಂದರ ವ್ಯಕ್ತಿತ್ವ ಹೊಂದಿರುವ ಒಬ್ಬ ಮಹಾನುಭಾವ ಆಡಳಿತದ ಚುಕ್ಕಾಣಿ ಹಿಡಿಯುತ್ತಾನೆ. ಆಗ ನಮ್ಮ ಸನಾತನ ಧರ್ಮದ ಉದ್ಧಾರವಾಗುತ್ತದೆ. ಈ ಸ್ವಾರ್ಥದ ರಾಜಕಾರಣಕ್ಕೆ ಕಡಿವಾಣ ಬೀಳುತ್ತದೆ. ರಾಮರಾಜ್ಯ ಪುನಃ ಬರುತ್ತದೆ" ಎಂದಳು. ಹಾಗೆಯೇ ವಿವೇಕಾನಂದರ ವ್ಯಕ್ತಿತ್ವದ ಮೋದೀಜೀ ಅವರೇ ಭಾರತದ ಚುಕ್ಕಾಣಿ ಹಿಡಿದಿದ್ದಾರೆ ಅಲ್ಲವೇ!

ಎಷ್ಟೋ ಬಾರಿ ನಾವು ನಮಸ್ಕರಿಸಿದಾಗ ತುಂಬು ಹೃದಯದಿಂದ ಅವಳು ಮಾಡುವ ಆಶೀರ್ವಾದ ಖಂಡಿತ ನಿಜವಾದ ನಿದರ್ಶನಗಳೂ ಇವೆ. ನನ್ನ ಮೊಮ್ಮಗ ಹುಟ್ಟುವುದಕ್ಕೆ ಮುಂಚೆ ನಾನು ನಮಸ್ಕರಿಸಿದಾಗೆಲ್ಲಾ "ಪುಟ್ಟ ಕೃಷ್ಣನ ಹಾಗೆ ಮೊಮ್ಮಗಾನೇ ಹುಟ್ಟುತ್ತಾನೆ" ಅನ್ನುತ್ತಿದ್ದಳು. ಅದೇ ನನ್ನ

ಮೊಮ್ಮಗಳು ಹುಟ್ಟುವಾಗ “ಎಲ್ಲಾ ದೈವೇಚ್ಛೆ” ಅನ್ನುತ್ತಿದ್ದಳು. ನನ್ನ ಪಾಲಿಗಂತೂ ಅವಳ ಬಾಯಲ್ಲಿ ಬರುವ ಮಾತುಗಳು ಆ ಜಗಜ್ಜನನಿಯೇ ನುಡಿಸುವಂತದ್ದು.

ನನಗೆ ಒಮ್ಮೆ muscle catch ಆಗಿ ಪೂರಾ ನೋವಿನಿಂದ ಮಲಗಿಬಿಟ್ಟಿದ್ದೆ. ರಾತ್ರಿ ೯ ರ ಸಮಯದಲ್ಲಿ ಬಂದು, ಆ ಜಗದಂಬೆಯ ಹೆಸರನ್ನು ಹೇಳಿಕೊಂಡು ನನ್ನ ತಲೆಯ ಮೇಲೆ ತನ್ನ ಅಭಯ ಹಸ್ತವನ್ನು ಇಟ್ಟು, ಗುಣವಾಗುತ್ತದೆ ಎಂದು ಆಶೀರ್ವದಿಸಿ, “ಹೆದರಬೇಡ, ಒಂದೆರಡು ದಿನಗಳಲ್ಲಿ ಗುಣಮುಖವಾಗುತ್ತದೆ” ಎಂದು ಹೇಳಿದಳು. ಆಶ್ಚರ್ಯವೆಂಬಂತೆ ಅವಳ ಆಶೀರ್ವಚನ ಮತ್ತು ಅವಳ Divine touch ಅಂತಾರಲ್ಲಾ ಅದು, ನನ್ನಲ್ಲಿ ಚೈತನ್ಯವನ್ನು ತುಂಬಿ ಶಕ್ತಿಯನ್ನು ನೀಡಿತು.

ಇನ್ನು ನಾನು ಹಾಗಿರಲಿ, ನಮ್ಮತ್ತೆಯವರಿಗೆ ಕೂಡಾ ಇದೇ ನಂಬಿಕೆ. ಅವಳು ನಮ್ಮ ಮನೆದೇವರು ಬನಶಂಕರಿಯ ಪೂಜೆಗೆ ಬರದಿದ್ದರೆ, ಅವರಿಗೆ ಆ ತಾಯಿ ಕನಸಿನಲ್ಲಿ ಬಂದೇ ಬಿಡುತ್ತಿದ್ದಳು. ಅದಕ್ಕೇ ನಮ್ಮತ್ತೆ, “ನೀನು ಬರದಿದ್ದರೆ ಆ ತಾಯಿಯ ಅನುಗ್ರಹ ಆಗಲ್ಲಮ್ಮ, ನೀನು ಬರಲೇಬೇಕು” ಎಂದು ಕಡ್ಡಾಯ ಮಾಡುತ್ತಿದ್ದರು. ಲತ ಆಗ ಅವರ ನಂಬಿಕೆಗೆ, ವಿಶ್ವಾಸಕ್ಕೆ ಮಣಿದು, ಲತ ಮತ್ತು ಬಾವ ಇಬ್ಬರೂ ಪಾರ್ವತೀ ಪರಮೇಶ್ವರರ ಹಾಗೆ ನಮ್ಮ ಮನೆಯ ಪೂಜೆಗೆ ಬಂದು ಭಾಗವಹಿಸಿ, ನಮ್ಮನ್ನು ಆಶೀರ್ವದಿಸುತ್ತಿದ್ದರು.

ಇದಿಷ್ಟೇ ಅಲ್ಲ, ಲತ ಪಲಾಯನವಾದಿಗಳಿಗೆ ಸರಿಯಾದ ಚಾಟಿಏಟು ನೀಡ್ತಾಳೆ. ಮನೇಲಿ ಏನಾದ್ರೂ ಶುಭಕಾರ್ಯ ನಡೀಬೇಕಾದಾಗ, “ನಮ್ಮ ಮನೆಯಲ್ಲಿ ಆ ಪದ್ದತಿ ಇಲ್ಲ, ಈ ಪದ್ದತಿ ಇಲ್ಲ” ಎನ್ನುವವರಿಗೆ ಲತ “ನಮ್ಮ ಹಿರಿಯರು, ಬಂಧು ಬಾಂಧವರ ಜೊತೆಗೂಡಿ ಮಾಡಲಿ ಎಂದೇ ಸಮಾರಂಭಗಳನ್ನ ಹುಟ್ಟುಹಾಕಿರುವುದು (ಆಚರಿಸೋದು), ಹೀಗಾದರೂ ಅನ್ನದಾನ ನಡೆಯಲಿ ಎನ್ನುವುದು ಅವರ ಉದ್ದೇಶ” ಎಂದಾಗ ಅವರು ಗಪ್ ಚಿಪ್, ಮಾತೇ ಇಲ್ಲ.

ಇನ್ನೊಂದು ಬಾರಿ ನಮ್ಮ ಮನೆಯ ಹಬ್ಬ, ಹರಿದಿನಗಳು, ಪೂಜೆ, ಪದ್ದತಿಗಳು ಮಾತಿಗೆ ಬಂತು. ಆಗ, ಅಲ್ಲಿದ್ದವರೊಬ್ಬರು “ಎಷ್ಟು ಚೆನ್ನಾಗಿ ಪೂಜೆ ಮಾಡ್ತಾರೆ ರಾಮಚಂದ್ರ, ಈಗಿನ ಕಾಲದಲ್ಲೂ ಹಿರಿಯರು ನಡೆಸಿದ ಪದ್ದತಿಯನ್ನೇ ಅನುಸರಿಸಿ, ಎಷ್ಟು ಶ್ರದ್ಧೆಯಿಂದ, ಯಾವ ಹಬ್ಬವನ್ನೂ ಬಿಡದೆ ಪಾಲಿಸಿಕೊಂಡು ಬರುತ್ತಿದ್ದಾರೆ. ನಿಜವಾಗಲೂ ನೀನು ಪುಣ್ಯ ಮಾಡಿದ್ದೆ ಅಂಥಾ ಗಂಡನನ್ನು ಪಡೆಯಕ್ಕೆ” ಎಂದರು. ಆಗ ಲತ ಥಟ್ಟನೆ “ಏನು, ಎಲ್ಲರೂ ರಾಮಚಂದ್ರನ್ನ ಮಾತ್ರ ಹೊಗಳುತ್ತೀರ? “ಓ ಲಕ್ಷ್ಮಣಾ” ಅಂತ ಅವರಿಗೆ ಎಲ್ಲಾ ಸಿದ್ದತೆಗಳನ್ನೂ ಮಾಡಿಕೊಟ್ಟು, ಮಡಿಯಾಗಿ ಅಡಿಗೆ ನೈವೇದ್ಯಕ್ಕೆ ಸಿದ್ದಪಡಿಸಿ, ಎಲ್ಲಾ ರೀತಿಯ ಸಹಕಾರ ಕೊಡ್ತಿಲ್ವಾ ಅವಳು, ಅವಳನ್ನ ಹೆಂಡತಿಯಾಗಿ ಪಡೆಯಕ್ಕೆ ರಾಮಚಂದ್ರನೂ ಪುಣ್ಯ ಮಾಡಿರಬೇಕು” ಅಂದಾಗ ಅಲ್ಲಿದ್ದವರ ಮುಖದಲ್ಲಿ ವಿರಾಜಿಸಿತು ಪೆಚ್ಚುನಗೆ.

ನನಗೆ ಬರೆಯಲು ಕೂತಾಗ ನೆನಪಿಗೆ ಬಂದದ್ದು ಈ ಒಂದೆರಡು ಸಂಗತಿಗಳಷ್ಟೆ. ನನಗೆ ಗುರುವಾಗಿ, ಅಕ್ಕನಾಗಿ, ಎಷ್ಟೋ ಕ್ಲಿಷ್ಟ ಪರಿಸ್ಥಿತಿಗಳಲ್ಲಿ ನಮಗೆ ಅಕ್ಕ, ಬಾವ ಇಬ್ಬರೂ ಮಾರ್ಗದರ್ಶನ

ಮಾಡಿದ್ದಾರೆ. ಅಕ್ಕ ಎಷ್ಟು ಮಮತಾಮಯಿಯೋ ಅಷ್ಟೇ ತಪ್ಪು ಕಂಡಲ್ಲಿ ಅಲ್ಲೇ ಖಂಡಿಸಿ, ಬುದ್ಧಿ ಹೇಳಿ ತಿದ್ದುತ್ತಾಳೆ. ಅವಳ ಆಧ್ಯಾತ್ಮಿಕ ಸಾಧನೆ ಅಪಾರ. ಒಟ್ಟಿನಲ್ಲಿ ಅವಳನ್ನು ಅಕ್ಕನಾಗಿ ಪಡೆದ ನಾನೇ **ಧನ್ಯೆ.**

ಈಗ **ಶ್ರೀಮತಿ ವಸಂತಾ** ಅವರು ನೆನೆಸಿಕೊಂಡ ಒಂದು ಪ್ರಸಂಗ.

ಒಮ್ಮೆ ಲತ, ಬಾವ ಬಂದಿದ್ದಾಗ ಎಲ್ಲರೂ ಸುನು ಮನೇಲಿ ಸೇರಿದ್ವಿ. ಲತ, ಬಾವ ವಾಪಸ್ ಮೈಸೂರಿಗೆ ಹೊರಡ್ತಾ ಇದ್ರು. ಪ್ಯಾಕಿಂಗ್ ಮುಗಿದಮೇಲೆ ಸೋಪ್ ಬಾಕ್ಸ್ ಮರೆತದ್ದು ನೆನಪಾಯ್ತು ಲತಾಗೆ. ಅವಳು “ಚೀ ಸೋಪ್ ಬಾಕ್ಸ್ ತೆಗೆದುಕೊಳ್ಳೋದು ಮರೆತೆ. ತಂದುಕೊಡ್ತೀರ?” ಅಂತ ಬಾವನ್ನ ಕೇಳಿದ್ಲು. ಬಾವನ ತಕ್ಷಣದ ಪ್ರತಿಕ್ರಿಯೆ ಹೀಗಿತ್ತು. “ಕರೆಕ್ಟ್, ಕರೆಕ್ಟ್, ಮನೆಯಲ್ಲಿ ತಕ್ಷಣಕ್ಕೆ ಐನೂರು ಸೀರೆ ಸಿಗತ್ತೆ, ಆದ್ರೆ ಸೋಪ್ ಬಾಕ್ಸ್ ಸಿಗಲ್ಲ”. ಎಲ್ಲರೂ ನಕ್ಕಿದ್ದೇ ನಕ್ಕಿದ್ದು. ನವಿರಾಗಿ ಅಕ್ಕನ ಉಡುಪಿನ ಮೇಲಿನ ಅಕ್ಕರೆಯ ಬಗ್ಗೆ ಬಾವ ಹೇಳಿದ ಮುತ್ತಿನಂಥಾ ಮಾತಿದು.

ಈಗ **ಶ್ರೀ ರಾಮಚಂದ್ರ** ಅವರು, ಲತಾ ಮತ್ತು ಶ್ರೀಧರ್ ಅವರೊಡನೆ ಅವರ ಒಡನಾಟದ ಬಗ್ಗೆ ಹಂಚಿಕೊಂಡ ಕೆಲವು ಮಾತುಗಳನ್ನ ಅವರ ನುಡಿಗಳಲ್ಲಿ ಕೇಳೋಣ ಬನ್ನಿ. ಶ್ರೀಮತಿ ಲತಾರವರು ಅವರ ನಿವಾಸದಲ್ಲಿ ಶ್ರೀತ್ಯಾಗರಾಜರ ಆರಾಧನಾ ಮಹೋತ್ಸವವನ್ನು ವಿಜೃಂಭಣೆಯಿಂದ ನೆರವೇರಿಸಿದಾಗ, ನಾದಾರ್ಚನೆ ಪುಸ್ತಕಮಾಲೆಯ ಮೊದಲ ಪುಸ್ತಕವನ್ನು ಬಿಡುಗಡೆ ಮಾಡಿದ್ದರು. ಆ ಪುಸ್ತಕದ ಬಗ್ಗೆಯೂ ಶ್ರೀ ರಾಮಚಂದ್ರ ಅವರು ತಮ್ಮ ಅನಿಸಿಕೆಗಳನ್ನು ಪ್ರಸ್ತುತ ಪಡಿಸಿದ್ದಾರೆ.

ನಾದಾರ್ಚನೆ ಪುಸ್ತಕ ಓದಿದ ಮೇಲೆ ನನಗೂ ಈ ಬಗ್ಗೆ ಎರಡು ಸಾಲು ಬರೆಯೋಣ ಎನ್ನಿಸಿತು. ಆದರೆ ಇದನ್ನು ಓದಿದ ನಂತರ ನಾಲ್ಕು ಸಾಲು ಬರೆಯಲು ನಾನು ಅರ್ಹನೇ ಎಂಬ ಶಂಕೆ ವ್ಯಕ್ತವಾಯಿತು. ಆದರೂ ಇದನ್ನು ಹೊಗಳಿಕೆ ಎಂದು ಭಾವಿಸುವುದಿಲ್ಲ ಎಂಬ ನನ್ನ ಪ್ರಾಂಜಲ ಅನಿಸಿಕೆ, ಇದನ್ನು ಸ್ವೀಕರಿಸುತ್ತಾರೆ ಅನ್ನೋ ನಂಬಿಕೆ. ನನ್ನ ಮಗಳು ಮಾನಸ ಪಿಯೂಸಿಗಾಗಿ 2004ರಲ್ಲಿ ಮೈಸೂರಿಗೆ ಬಂದಳು. ಸದ್ವಿದ್ಯಾ ಕಾಲೇಜಿನಲ್ಲಿ ಸೀಟು ಸಿಕ್ಕಾಗಿನಿಂದ ಅವಳ ಎರಡು ವರುಷದ ಪಿಯು ಮುಗಿಯುವವರೆಗೂ ಲತಾ ಹಾಗೂ ಶ್ರೀಧರ್ ಅವಳಿಗೆ ಹಾಗೂ ಮಾಲನಿಗೆ ಮಾರ್ಗದರ್ಶನ ಮಾಡಿದರು. ರಚಿತ L.K.G ಗಾಗಿ ಶಾರದವಿಲಾಸ ಸೇರಿದ್ದು, ದೊಡ್ಡಪ್ಪ ದೊಡ್ಡಮ್ಮ ಎಂದು ಮನೆಯಲ್ಲಿ ಹಿಂದೆ ಹಿಂದೆ ಓಡಾಡುತ್ತಿದ್ದಾಗ “ಎಲ್ಲಿ ನಿಮ್ಮ ದಡ್ಡಪ್ಪ ದಡ್ಡಮ್ಮ” ಎಂದು ಹಾಸ್ಯ ಮಾಡುತ್ತಿದ್ದ ರೀತಿ ಇವತ್ತಿಗೂ ಕಣ್ಣಿಗೆ ಕಟ್ಟಿದಂತಿದೆ.

ನಂತರ 2006 ರಲ್ಲಿ ನನಗೆ ಮೈಸೂರಿಗೆ ವರ್ಗವಾದಾಗ ಜಯನಗರದ ಮನೆಯಲ್ಲಿ ನಮ್ಮ ಹಿರಿಯರು ನಡೆಸಿಕೊಂಡು ಬಂದ ಶಾಖಾಂಬರಿ ನವರಾತ್ರಿಯು ವರ್ಷ ವರ್ಷಕ್ಕೂ ವಿಜೃಂಭಣೆಯಿಂದ ನಡೆಯಲು ಪ್ರಾರಂಭವಾಯ್ತು. ಇದಕ್ಕೆ ಲತಾ, ಬಾವ, ಮಾತೃ ಸ್ವರೂಪರಾದ ಪದ್ದು ಆಂಟಿ, ಇಂದ್ರ ಆಂಟಿ ಹಾಗೂ ಇತರರು ಮೂಲಕಾರಣ.

ಈ ಹಬ್ಬದ ಅವಧಿಯಲ್ಲಿ ಲತಾ ಮತ್ತು ಬಾವ ಇವರ ಉಪಸ್ಥಿತಿ ಬಗ್ಗೆ ಬರೆಯಲೇ ಬೇಕು. ನಮ್ಮ ತಾಯಿಯವರು, ಇವರಿಬ್ಬರೂ ಭಕ್ತಿ ಶ್ರದ್ಧೆಯ ಸಾಕಾರದಂತಿದ್ದು, ಇವರನ್ನು ನವರಾತ್ರಿಯ ಎಲ್ಲಾ ದಿನಗಳು ಪ್ರಸಾದ ತೆಗೆದುಕೊಂಡು ಹೋಗಲು ಆಗ್ರಹಿಸಿದ್ದು, ಅವರ ಕಾಲೇಜಿನ ಬಿಡುವಿಲ್ಲದ ಕಾರ್ಯಗಳ ನಡುವೆಯೂ ಬಂದು ದೇವಿಯ ಪ್ರಸಾದ ಸ್ವೀಕರಿಸುತ್ತಿದ್ದರು. ಇವರಿಬ್ಬರೂ ಬರುವುದು ತಡವಾದಲ್ಲಿ ನಮ್ಮ ತಾಯಿಯವರ ಚಡಪಡಿಕೆ ಹೇಳತೀರದು. ಅವರು ಬಂದು ಹೋದಮೇಲೆ ಅವರಿಗೆ ನಿರಾಳ. ನಿವೃತ್ತಿಯ ನಂತರ ಹಾಗೂ ಈ ಅವಧಿಯಲ್ಲಿ, ಅಮೆರಿಕ ಪ್ರವಾಸದಲ್ಲಿದ್ದು ಹಬ್ಬದ ಕೊನೆಯ ದಿವಸ ಬಂದರೂ, ಜೆಟ್ ಲಾಗ್ ಲೆಕ್ಕಿಸದೆ ಬಂದು ದೇವಿಯ ದರ್ಶನ ಪಡೆಯುತ್ತಿದ್ದರು.

ಲತಾರವರ ಉತ್ಕಟ ದೈವ ಭಕ್ತಿ, ದೇವರುಗಳ ಅರ್ಚನೆಯ ಸ್ವರೂಪ. ದೈವಗಳಲ್ಲಿನ ಧನ್ಯತಾ ಭಾವದ ಬಗ್ಗೆ ಅವರ ನಿವೃತ್ತಿಯ ನಂತರದ ಓದುವಿಕೆ, ಕ್ಷೇತ್ರಗಳ ದರ್ಶನ ಹಾಗೂ ಕರೋನ ಕಾಲದಲ್ಲಿನ ಸಂದಿಗ್ಧ ಸ್ಥಿತಿಗಳು ಅವರನ್ನು ಜ್ಞಾನ ಮಾರ್ಗದ ಕಡೆಗೆ ಸೆಳೆದೊಯ್ಯಿತು ಎಂದು ಆಗಾಗ ಹೇಳುತ್ತಿದ್ದರು. ಇದು ಒಂದು ರೀತಿಯ ಜ್ಞಾನ ಯೋಗದ ಸಾಧನೆ. ತೇಣಿಯ ಸ್ವಾಮಿ ಓಂಕಾರಾನಂದರು ಹೃಷಿಕೇಶದ ಶಿಬಿರದಲ್ಲಿ ಹೇಳುತ್ತಿದ್ದ ಒಂದು ಮಾತು ಈ ಪರಿಸ್ಥಿತಿಯಲ್ಲಿ ಜ್ಞಾಪಕಕ್ಕೆ ಬರುತ್ತದೆ. ಈ ರೀತಿಯ ಆಧ್ಯಾತ್ಮ ಸಾಧನೆಗೆ ನಾಲ್ಕು ಮೆಟ್ಟಿಲುಗಳು, ಸತ್ಸಂಗ, ವಿವೇಕ, ಸಂಕಲ್ಪ, ಪ್ರಾರ್ಥನೆ. ಇವುಗಳ ಮೂಲಕವೇ ಸಾಧನೆ.

ಸಾಧಕರು ಯಾವಾಗಲೂ ಒಬ್ಬಂಟಿ. ಇಲ್ಲಿ ಸಾಧನೆಯ ಮಾರ್ಗದಲ್ಲಿ, ಸಾಧನೆಯ ದಿಕ್ಕಿನಲ್ಲಿ, ಜೊತೆಯಲ್ಲಿರುವವರನ್ನೂ ಕರೆದೊಯ್ಯುವ ಈ ಪ್ರಯತ್ನವನ್ನು ಶ್ಲಾಘಿಸಿದರೆ ಹೊಗಳಿಕೆ ಎನ್ನಬಹುದು.

ಇಲ್ಲಿನ ಸಾಧನೆಯಲ್ಲಿ, ಜ್ಞಾನ ಮಾರ್ಗದ ಸಾಧನೆಯಲ್ಲಿ, ದೈವಿಕ ಭಾವ, ಧನ್ಯತಾ ಭಾವ ಕೇವಲ ಪೂಜೆ ಅರ್ಚನೆಯಿಂದಲೇ ಅಲ್ಲದೆ, ಈ ರೀತಿಯ ಸತ್ಸಂಗ, ಸ್ತೋತ್ರಗಳ ಕಲಿಕೆ, ಪಾರಾಯಣೆಯ ಮೂಲಕ ಸಾಧ್ಯವೆಂಬುದನ್ನು ನಾದಾರ್ಚನೆ ತೋರಿಸಿದೆ.

ನಾದಾರ್ಚನೆಯಲ್ಲಿನ ಪಂಚದಶಾಕ್ಷರಿ, ಸಪ್ತಮಾತೃಕಾ ತತ್ತ್ವ, ಶಂಕರ ಸ್ತೋತ್ರಲಹರಿ, ಮಾನಸಿಕ ದರ್ಶನ, ಇವುಗಳ ಅರ್ಥಪೂರ್ಣ ವಿವರಣೆಯ ಹಿಂದಿನ ಶ್ರಮ ನಿಜಕ್ಕೂ ಲತಾ ಅವರ ದೈವಿಕ ಶಕ್ತಿಯ ಫಲನ ಎಂದರೆ ಅತಿಶಯೋಕ್ತಿಯಲ್ಲ. ಲತಾ ಅವರು ರಾಮಾಯಣದ ಸುಂದರ ಕಾಂಡ ಪಾರಾಯಣದ ಬಗ್ಗೆ ನನ್ನ ಅನಾರೋಗ್ಯದ ಕಾಲದಲ್ಲಿ ನೀಡಿದ ಮಾರ್ಗದರ್ಶನ ಹಾಗೂ ಅದರಿಂದ ನಾನು ಪಡೆದ ಪರಿಹಾರ ಸ್ಮರಣೀಯ. ಮೈಸೂರಿಗೆ ಬರುವ ವರೆಗೂ ನನಗೆ ಲಲಿತಾ ಸಹಸ್ರನಾಮದ ಅಭ್ಯಾಸ ಇರಲಿಲ್ಲ. ನನ್ನ ಭಾವನೆಯಲ್ಲಿ ಇದನ್ನು ಗುರುಮುಖೇನ ಕಲಿಯಬೇಕೆಂಬ ಆಸೆ. ಮೈಸೂರು ಮನೆಯಲ್ಲಿದ್ದಾಗ, ಅಲ್ಲಿನ ದೈವೀಕ ಪರಿಸರದಲ್ಲಿ ಮಾತೃತ್ರಯರು ಉಪದೇಶ ನೀಡಿ, ಲಲಿತಾ ಸಹಸ್ರನಾಮವು ನನ್ನ ಪೂಜೆಯ ಅವಿಭಾಜ್ಯ ಅಂಗವಾಗುವಂತೆ ಮಾಡಿದರು. ಜ್ಞಾನ ಮಾರ್ಗದ ಈ ಸಾಧನೆಯ ಮಜಲಿನಲ್ಲಿ ಬಹುದೂರ ಸಾಗಿರುವ ನಾದಾರ್ಚನೆಯ ಸತ್ಸಂಗ ಹೀಗೇ ಮುಂದುವರೆದು, ಜ್ಞಾನ ಮಾರ್ಗದಲ್ಲಿ ಇನ್ನೂ ಹೆಚ್ಚಿನ ಜ್ಞಾನ ಲಭಿಸಲಿ. ಜಗನ್ಮಾತೆ ಎಲ್ಲರಿಗೂ ಈ ದಿಶೆಯಲ್ಲಿ ಆಶೀರ್ವದಿಸಲಿ ಎಂಬುದೇ ನನ್ನ ಪ್ರಾರ್ಥನೆ.

ಶ್ರೀಮತಿ ಲತಾ ಹಾಗೂ ಶ್ರೀಧರ್ ಅವರ ಪ್ರೀತಿ, ಮಮತೆ, ಕಾಳಜಿ, ನವಿರಾದ ಹಾಸ್ಯ ತುಂಬಿದ ಮಾತುಗಳು, ಅಗತ್ಯ ಬಿದ್ದಾಗ ಬುದ್ಧಿ ಮಾತುಗಳಿಂದ ನಾವೆಲ್ಲಾ ಅವರಿಬ್ಬರ ಅಭಿಮಾನಿಗಳಾಗಿದ್ದೇವೆ. ನಮ್ಮೆಲ್ಲರಂತೆ ಪುಟ್ಟ **ಮಾನಸ** ಸಹಾ ಅವರಿಬ್ಬರ ದೊಡ್ಡ ಅಭಿಮಾನಿ ಎಂದರೆ ಅತಿಶಯೋಕ್ತಿಯಲ್ಲ. ಈಗ ಮಾನಸಳ ನುಡಿಗಳಲ್ಲಿ ಅವಳ ನೆಚ್ಚಿನ ದೊಡ್ಡಮ್ಮನ ಬಗ್ಗೆ ಕೇಳೋಣ ಬನ್ನಿ.

ಕಳೆದ ಹದಿನೆಂಟು ಇಪ್ಪತ್ತು ವರ್ಷಗಳಿಂದ ನಾ ಕಂಡಂತೆ ಸುತ್ತಲಿರುವ ಎಷ್ಟೋ ಜೀವಿಗಳ ಸ್ಫೂರ್ತಿಯ ಚಿಲುಮೆ ಮತ್ತು Life Influencer, ನನ್ನ ದೊಡ್ಡಮ್ಮ ಲತಾ ಎಂದರೆ ತಪ್ಪಾಗಲಾರದು. Netflix series ಆಗಲಿ, ಆಧ್ಯಾತ್ಮಿಕ ವಿಮರ್ಶೆಗಳಾಗಲಿ, Fashion ಮಾತುಕತೆಗಳಾಗಲಿ, ಅವರ ಅಭಿಪ್ರಾಯ ಮತ್ತು ತಾತ್ಪರ್ಯಗಳು ಸಮಂಜಸ ಮತ್ತು ಸೃಜನಾತ್ಮಕ. ಸಮಸ್ಯೆ ಏನೇ ಇದ್ದರೂ ಅವರ ಪರಿಹಾರಗಳು ಕಾಲಕ್ಕೆ ತಕ್ಕಂತೆ "Simple and best". ಹಬ್ಬ, ಹರಿದಿನಗಳಲ್ಲಿ ಅವರ ಕ್ರಿಯಾಶೀಲತೆಯ ಕೈಚಳಕ ನೋಡಲು ನಾನು ಸದಾ ಕಾತುರತೆಯಿಂದ ಎದುರು ನೋಡುತ್ತೇನೆ. ಕಳೆದ ಹದಿನೆಂಟು ಇಪ್ಪತ್ತು ವರ್ಷಗಳಿಂದ ನನ್ನ Life Influencer, ನನ್ನ ದೊಡ್ಡಮ್ಮ ಲತಾ. ತಾನೂ ಬೆಳೆದು, ತನ್ನ ಜೊತೆಗಿರುವವರನ್ನೂ ಬೆಳೆಸುವ ನಿಸ್ವಾರ್ಥ ಹೃದಯಿ. ನಾ ಕಂಡಂತೆ ಶಿಷ್ಯ ವೃಂದದ, ಎಷ್ಟೋ ಬಂಧು ಬಾಂಧವರ ಭವಿಷ್ಯ ರೂಪಿಸುವಲ್ಲಿ ಅವರ ಕೊಡುಗೆ ಅಪಾರ. **"ಇಚ್ಛಾ ಶಕ್ತಿ, ಜ್ಞಾನ ಶಕ್ತಿ, ಕ್ರಿಯಾ ಶಕ್ತಿ"** ಸ್ವರೂಪಿಣಿಯಾಗಿ ಪ್ರತಿಯೊಂದು ಬಾರಿಯೂ ಗೋಚರಿಸುವ ಅವರು, ನೂರು ಕಾಲ ಸಂತೋಷದಿಂದ ನಮ್ಮನ್ನೂ ಇನ್ನಷ್ಟು ಹುರಿದುಂಬಿಸಲಿ ಎನ್ನುವುದು ನನ್ನ ಪ್ರಾರ್ಥನೆ.

**॥ಜಗದಂಬಾರ್ಪಣಮಸ್ತು॥**

